1. ಸಂತಾಪ ಸೂಚನೆ

ವಿಷಯ:- ಮಾಜಿ ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮತ್ತಿತರ ಗಣ್ಯರ ನಿಧನದ ಬಗ್ಗೆ.

ಮಾನ್ಯ ಸಭಾಧ್ಯಕ್ಷರು:-

ಮಾಜಿ ಸಚಿವರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ.ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜಿ. ಶಂಕರೇಗೌಡ, ಶ್ರೀ ಎಂ. ಬಿ. ದಿವಟರ್, ಶ್ರೀ.ಬಿ. ಪಿ. ಗಂಗಾಧರ್ ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಟಿ. ಚನ್ನಬಸಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಹಾರನಹಳ್ಳಿ ರಾಮಸ್ವಾಮಿ

ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ ಅವರು 1922ನೇ ಫೆಬ್ರವರಿ, 22ರಂದು ಅರಸೀಕೆರೆ ತಾಲ್ಲೂಕು ಹಾರನಹಳ್ಳಿಯಲ್ಲಿ ಜನಿಸಿದ್ದು, ಬಿ.ಎಸ್ಸಿ ಹಾಗೂ ಎಲ್.ಎಲ್.ಬಿ ಪದವೀಧರರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಹಾಗೂ 1947ರಲ್ಲಿ ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರದ ರಚನೆಗಾಗಿ ನಡೆದ ಹೋರಾಟಗಳಲ್ಲಿ ಭಾಗಿಯಾಗಿ ಸೆರೆಮನೆವಾಸ ಅನುಭವಿಸಿದ್ದರು. ಯುವ ಹೋರಾಟಗಾರರಾಗಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದಿದ್ದ ಶ್ರೀಯುತರು ಕಾಂಗ್ರೆಸ್ ಪಕ್ಷದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಇಪ್ಪತ್ತು ವರ್ಷಗಳ ಕಾಲ ಹಾಸನ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಹಕಾರಿ ಸಂಘ ಹಾಗೂ ಭಾರತ ಸೇವಾ ದಳದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ, ಕಾನೂನು ಕಾಲೇಜಿನ ಮೊದಲ ಪ್ರಾಂಶುಪಾಲರು ಹಾಗೂ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದು ಶ್ರೀಯುತರು, ಸಂವಿಧಾನ ಹಾಗೂ ಅಂತರಾಷ್ಟ್ರೀಯ ಕಾನೂನುಗಳನ್ನು ಬೋಧಿಸುತ್ತಿದ್ದರು. 1960 ರಿಂದ 1966ರವರೆಗೆ ಹಾಗೂ 1990 ರಿಂದ 1992ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿದ್ದು, 1978 ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದರು. 1992ರಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಮುಜರಾಯಿ ಇಲಾಖೆಯ ಸಚಿವರಾಗಿ, 2000ದಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಅಪ್ಪಟ ಗಾಂಧಿವಾದಿ, ಲೋಕಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಕೊರವಂಜಿ ಮಾಸ ಪತ್ರಿಕೆಯ ಅಂಕಣಕಾರರಾಗಿ, ಜನವಾಣಿ ಪತ್ರಿಕೆಯ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದರು.

ಶ್ರೀಯುತರು ದಿನಾಂಕ 4.4.2009ರಂದು ನಿಧನ ಹೊಂದಿದರು.

2. ಶ್ರೀ ಬಿ.ಎಂ.ಇದಿನಬ್ಬ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ.ಇದಿನಬ್ಬ ಅವರು 1920ನೇ ಸೆಪ್ಟೆಂಬರ್, 17ರಂದು ಉಪ್ಪಿನಂಗಡಿಯ ಸಮೀಪದ ಹಳ್ಳಿಯಲ್ಲಿ ಜನಿಸಿದ್ದರು. ಶ್ರೀಯುತರು ಸ್ವಾತಂತ್ರ್ಯಯ ಹೋರಾಟಗಾರರು. ಮಂಗಳೂರಿನ ದಕ್ಷಿಣ ಕನ್ನಡ ಕೃಷಿಕರ ಮಾರಾಟ ಸಹಕಾರ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಯುತರು ಪ್ರಸಿದ್ಧ ಸಾಹಿತಿಗಳು. ಹೃದಯ ಗೀತೆಗಳು, ಹರಿದ ಕೋಟು ಮುಂತಾದ ಆರು ಕಥಾ ಸಂಕಲನಗಳು, ಮಕ್ಕಳಿಗಾಗಿ ಸಾಹಿತ್ಯ ಕೃತಿಗಳು ಹಾಗೂ ಆರುನೂರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯರಾಗಿ, ರಾಜ್ಯ ಸರ್ಕಾರದ ವಿವಿಧ ಪ್ರಶಸ್ತಿಗಳ ಆಯ್ಕೆ ಸಮಿತಿ ಸದಸ್ಯರಾಗಿ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ನಾಲ್ಕು ಎಂಟು ಹಾಗೂ ಒಂಭತ್ತನೇ ವಿಧಾನಸಭೆಗೆ ಉಳ್ಳಾಲ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಗೊರೂರು ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮುಂತಾದ ಗೌರವಗಳಿಗೆ ಪಾತ್ರರಾಗಿದ್ದು, ನೂರಾರು ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದರು.

ಶ್ರೀಯುತರು ದಿನಾಂಕ 11.4.2009ರಂದು ನಿಧನ ಹೊಂದಿದರು.

3. ಶ್ರೀ ವಿ.ವಾಸುದೇವ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ವಾಸುದೇವ ಅವರು 1956ನೇ ಜುಲೈ, 17ರಂದು ಮೈಸೂರಿನಲ್ಲಿ ಜನಿಸಿದ್ದು, ಬಿ.ಎ. ಪದವೀಧರರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನರ ಶೋಷಣೆಯ ವಿರುದ್ಧ ಸಂಘಟಿಸಿದ್ದರು. ಅಖಿಲ ಕರ್ನಾಟಕ ದಲಿತ ಹಾಗೂ ಅಲ್ಪಸಂಖ್ಯಾತ ಸಂಘಟನೆಯ ಅಧ್ಯಕ್ಷರಾಗಿದ್ದ ಶ್ರಿಯುತರು ಏಳನೇ ವಿಧಾನಸಭೆಗೆ ಟಿ.ನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13.4.2009ರಂದು ನಿಧನ ಹೊಂದಿದರು.

4. ಶ್ರೀ ಜಿ.ಶಂಕರೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ.ಶಂಕರೇಗೌಡ ಅವರು 1937ನೇ ಜುಲೈ, 20ರಂದು ಹೊಸಪೇಟೆಯಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ಸರಳ ವ್ಯಕ್ತಿತ್ವವನ್ನು ಹೊಂದಿದ್ದ ಶ್ರೀಯುತರು ರೈತರ ಪರವಾಗಿ ಅಪಾರ ಕಾಳಜಿಯನ್ನು ಹೊಂದಿದ್ದು, ಥಿಯೋಸಾಫಿಕಲ್ ಮಹಿಳಾ ಕಾಲೇಜಿನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಏಳು ಹಾಗೂ ಹತ್ತನೇ ವಿಧಾನಸಭೆಗೆ ಹೊಸಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 27.4.2009ರಂದು ನಿಧನ ಹೊಂದಿದರು.

5. ಶ್ರೀ ಎಂ.ಬಿ.ದಿವಟರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಬಿ.ದಿವಟರ್ ಅವರು 1950ನೇ ಜೂನ್, 5 ರಂದು ಕೊಪ್ಪಳದಲ್ಲಿ ಜನಿಸಿದ್ದರು. ಎಂ.ಎ ಪದವೀದರರಾಗಿದ್ದ ಶ್ರೀಯುತರು ಕೃಷಿಕರಾಗಿದ್ದರು. ಕೊಪ್ಪಳ ಪುರಸಭೆಯ ಅಧ್ಯಕ್ಷರಾಗಿದ್ದ ಶ್ರೀಯುತರು ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪಿತರು. ಸಿಂಗಟಾಲೂರು ಮತ್ತು ಹಿರೇಹಳ್ಳ ಯೋಜನೆಯ ಅನುಷ್ಠಾನಕ್ಕೆ ತೀವ್ರ ಹೋರಾಟ ನಡೆಸಿದ್ದ ಶ್ರೀಯುತರು ಏಳು ಹಾಗೂ ಒಂಭತ್ತನೇ ವಿಧಾನಸಭೆಗೆ ಕೊಪ್ಪಳ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 26.5.2009ರಂದು ನಿಧನ ಹೊಂದಿದರು.

6. ಶ್ರೀ ಬಿ.ಪಿ.ಗಂಗಾಧರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಪಿ.ಗಂಗಾಧರ್ ಅವರು 1924ನೇ ಮೇ, 12ರಂದು ಮಧುಗಿರಿ ತಾಲ್ಲೂಕು ಬೆಲ್ಲದನಾಡು ಗ್ರಾಮದಲ್ಲಿ ಜನಿಸಿದ್ದರು. ಬಿ.ಎಸ್ಸಿ ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ವಕೀಲರಾಗಿದ್ದರು. 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರು. ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರಿಯುತರು ನಾಲ್ಕನೇ ವಿಧಾನಸಭೆಗೆ ತುಮಕೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 03.7.2009ರಂದು ನಿಧನ ಹೊಂದಿದರು.

7.ಶ್ರೀ ಬಿ.ಟಿ.ಚನ್ನಬಸಪ್ಪ

ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಬಿ.ಟಿ.ಚನ್ನಬಸಪ್ಪ ಅವರು 1958ನೇ ಜುಲೈ, 21ರಂದು ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದಲ್ಲಿ ಜನಿಸಿದ್ದು, ಕೃಷಿಕರು ಹಾಗೂ ವ್ಯಾಪಾರಸ್ಥರು, ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಹಲವಾರು ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಇಂದಿರಾ ಪ್ರಿಯದರ್ಶಿನಿ, ರಾಷ್ಟ್ರೀಯ ನಿರ್ಮಾಣ ಪ್ರಶಸ್ತಿ ಹಾಗೂ ಭಾರತೀಯ ಉದ್ಯೋಗ ರತ್ನ ಪ್ರಶಸ್ತಿಗಳು ಶ್ರೀಯುತರಿಗೆ ಲಭ್ಯವಾಗಿದ್ದವು. 1998 ಹಾಗೂ 2004ರಲ್ಲಿ ಎರಡು ಬಾರಿ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 16.4.2009ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇಂದು ತಾವು ಮಂಡಿಸಿರುವಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ, ಕಳೆದ ಅಧಿವೇಶನದ ನಂತರ ನಮ್ಮನ್ನು ಅಗಲಿರುವಂಥ ನಾಯಕರ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಂದಿಡಲು ನಾನು ಬಯಸುತ್ತೇನೆ.

ಹಾರ್ನಳ್ಳಿ ರಾಮಸ್ವಾಮಿಯವರ ಬಹುಮುಖ ಸಾಧನೆಯ ಬಗ್ಗೆ ನಮ್ಮೆಲ್ಲರಿಗೂ ತಿಳಿದಿದೆ. ಕಾನೂನು, ಶಿಕ್ಷಣ, ಪತ್ರಿಕೋದ್ಯಮ ಹಾಗೂ ಸಮಾಜಸೇವೆಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡು ಅನನ್ಯ ಸೇವೆಯನ್ನು ಈ ನಾಡಿಗೆ ಮಾಡಿದ್ದಾರೆ. 1942ನೇ ಇಸವಿಯಲ್ಲಿ ನಡೆದ Quit India ಚಳುವಳಿಯಲ್ಲಿ ಭಾಗವಹಿಸಿದ್ದ ಶ್ರೀಯುತರು, ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಇತರ ಜನಪರ ಹೋರಾಟಗಳಲ್ಲಿಯೂ ಭಾಗಿಯಾಗಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ, ಕಾನೂನು ಕಾಲೇಜಿನ ಮೊದಲ ಪ್ರಾಂಶುಪಾಲರು ಹಾಗೂ Professor ಆಗಿದ್ದ ಅವರು 1960ರಿಂದ ಸಕ್ರಿಯ ರಾಜಕಾರಣಿಯಾಗಿ ತಮ್ಮನ್ನು ತೊಡಗಿಸಿಕೊಂಡು ಶಾಸಕರಾಗಿ, ಸಚಿವರಾಗಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಸಂಯುಕ್ತ ಕರ್ನಾಟಕ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ನೀಡಿದರು. ಅವರು ನಿಧನದಿಂದ ಒಂದು ರೀತಿಯಲ್ಲಿ ವೈಯಕ್ತಿಕವಾಗಿ ನನಗೆ ತುಂಬಲಾರದ ನಷ್ಟವಾಗಿದೆ. ನನಗೆ ಯಾವುದೇ ಕ್ಲಿಷ್ಟ ಸಮಸ್ಯೆಗಳು ಎದುರಾದಾಗ, ನನಗೆ ದಿಕ್ಕು ತೋಚದೇ ಇದ್ದಾಗ, ನಾನು ಹೋಗಿ ಅವರನ್ನು ಭೇಟಿ ಮಾಡಿ ಆ ಸಮಸ್ಯೆಗಳ ಬಗ್ಗೆ ಅವರ ಜೊತೆಗೆ ಸಮಾಲೋಚನೆ ಮಾಡಿದಾಗ ಅವರು ಹೇಳುತ್ತಿದ್ದಂಥ ತಿಳುವಳಿಕೆಯ ಮಾತುಗಳು ನನಗೆ ಒಂದು ರೀತಿ ನೆಮ್ಮದಿಯನ್ನು ತರುತ್ತಿದ್ದವು. ಅಂಥ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡು ಬಡವಾಗಿದ್ದೇವೆ.

ಅದೇ ರೀತಿ, ಬಿ.ಎಂ.ಇದಿನಬ್ಬರವರು ಮೂರು ಬಾರಿ ಉಳ್ಳಾಲ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಅತ್ಯಂತ ಸಮರ್ಥ ರೀತಿಯಲ್ಲಿ ಶಾಸಕರಾಗಿ ಕಾರ್ಯ ನಿರ್ವಹಿಸಿದ್ದರು. ಬಿ.ಎಂ. ಇದಿನಬ್ಬರವರು ಬಹುಮುಖ ಪ್ರತಿಭೆಯುಳ್ಳಂಥ ಒಬ್ಬ ಹಿರಿಯ ವ್ಯಕ್ತಿಯಾಗಿದ್ದರು. ಬಾಲ್ಯದಿಂದಲೇ ಸಾಹಿತ್ಯದ ಬಗ್ಗೆ ಒಲವನ್ನು ಹೊಂದಿದ್ದಂಥ ಶ್ರೀಯುತರು ಮಂಗಳೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದರು. 1987ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗೂ ಸಹ ಅವರು ಪಾತ್ರರಾಗಿದ್ದರು. ತಮ್ಮೆಲ್ಲರ ಗಮನಕ್ಕೆ ಒಂದು ಸಂಗತಿಯನ್ನು ತರಲು ಇಚ್ಛೆಪಡುತ್ತೇನೆ, ಆಶ್ಚರ್ಯದ ಸಂಗತಿ ಎಂದರೆ ಇದಿನಬ್ಬರವರು 600ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದರು. ಗಾಂಧಿವಾದಿ, ಕನ್ನಡದ ಕೋಗಿಲೆಯಾಗಿದ್ದ ಶ್ರೀ ಇದಿನಬ್ಬರವರು ಇವತ್ತು ನಮ್ಮನ್ನು ಅಗಲಿದ್ದಾರೆ.

ಅದೇ ರೀತಿ, ಎಂ.ಪಿ.ಈಶ್ವರಪ್ಪನವರು ಹಿರಿಯ ರಾಜಕಾರಣಿಯಾಗಿದ್ದರು. ವಿಧಾನ ಪರಿಷತ್ತಿನ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದಂಥ ಎಂ.ಪಿ. ಈಶ್ವರಪ್ಪನವರು ಜೂನ್ 2009ರಲ್ಲಿ ನಮ್ಮನ್ನು ಅಗಲಿದ್ದಾರೆ. ಅವರು ಸಮರ್ಥ ವಕೀಲರಾಗಿ, ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರಾಗಿ, ಭಾರತ ತೈಲ ಸಂಸ್ಥೆಯ ಅಧ್ಯಕ್ಷರಾಗಿ, ಜನಾನುರಾಗಿಯಾಗಿ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

1956ನೇ ಜುಲೈ 17ರಂದು ಮೈಸೂರಿನಲ್ಲಿ ಜನಿಸಿದ್ದ ವಿ.ವಾಸುದೇವ್‌ರವರು 7ನೇ ವಿಧಾನಸಭೆಗೆ ಟಿ.ನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಅವರು ಅಖಿಲ ಕರ್ನಾಟಕ ದಲಿತ ಮತ್ತು ಅಲ್ಪಸಂಖ್ಯಾತ ಸಂಘಟನೆಯ ಅಧ್ಯಕ್ಷರಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಶೋಷಣೆಯ ವಿರುದ್ಧ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ಒಬ್ಬ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ.

ಅದೇ ರೀತಿ, ಬಿ.ಟಿ.ಚನ್ನಬಸಪ್ಪನವರು ನಮ್ಮೆಲ್ಲರಿಗೂ ಅತ್ಯಂತ ಆತ್ಮೀಯರು, ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾಯಿಸಲ್ಪಟ್ಟಿದ್ದ ಅವರು ಒಬ್ಬ ಕೃಷಿಕರಾಗಿ, ಸಮಾಜ ಸೇವಕರಾಗಿ ಹಾಗೂ ಶಿಕ್ಷಣ ತಜ್ಞರಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಂಥವರು. ಇಂದು ಅವರು ನಮ್ಮನ್ನು ಅಗಲಿದ್ದಾರೆ.

ಅದೇ ರೀತಿ, ಹೊಸಪೇಟೆಯವರಾದ ಶ್ರಿಯುತ ಜಿ. ಶಂಕರೇಗೌಡರು 7 ಮತ್ತು 10ನೇ ವಿಧಾನಸಭೆಗೆ ಆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಕೃಷಿಕರ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದಂಥ ಅವರು ನನ್ನ ಅತ್ಮೀಯ ಸ್ನೇಹಿರಾಗಿದ್ದರು. ಅವರನ್ನು ಇಂದು ನಾವು ಕಳೆದುಕೊಂಡಿದ್ದೇವೆ.

ಅದೇ ರೀತಿ, ಶ್ರೀಯುತ ಎಂ.ಬಿ.ದಿವಟರ್‌ರವರು ಕೊಪ್ಪಳ ಕ್ಷೇತ್ರದಿಂದ ಎರಡು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸಿಂಗಟಾಲೂರು ಮತ್ತು ಹಿರೇಹಳ್ಳ ಯೋಜನೆಗಳ ಅನುಷ್ಠಾನಕ್ಕಾಗಿ ಅವರು ತೀವ್ರ ಹೋರಾಟ ನಡೆಸಿದ್ದರು. ಎಂ.ಎ.ಪದವೀದರರಾಗಿದ್ದಂಥ ಶ್ರೀಯುತರು ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಸೇವೆ ಸಲ್ಲಿಸಿದ್ದರು.

ಅದೇ ರೀತಿ, ಬಿ.ಪಿ.ಗಂಗಾಧರ್‌ರವರು 4ನೇ ವಿಧಾನಸಭೆಗೆ ತುಮಕೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಬಿ.ಎಸ್ಸಿ. ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ಇಂದು ನಮ್ಮನ್ನು ಅಗಲಿದ್ದಾರೆ.

ನಾಡುನುಡಿಯ ಬಗ್ಗೆ, ನಾಡಿನ ಅಭಿವೃದ್ಧಿಯ ಬಗ್ಗೆ ತಮ್ಮ ಜೀವನದುದ್ದಕ್ಕೂ ದುಡಿದಂಥ ಇಂಥ ಮಹನೀಯರನ್ನು ಕಳೆದುಕೊಂಡು ಕನ್ನಡ ನಾಡು ಬಡವಾಗಿದೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ನಿಧನದಿಂದ ಉಂಟಾಗಿರುವಂಥ ನೋವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ಬರಲಿ

ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ಅಧ್ಯಕ್ಷರು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಈ ಸದನದ ಮುಂದೆ ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಕಳೆದ ಅಧಿವೇಶನದ ನಂತರ, ಹಿಂದೆ ಈ ಮನೆಯ ಸದಸ್ಯರಾಗಿದ್ದಂಥ 4–5 ಜನರು ಕಾಲವಾಗಿದ್ದಾರೆ. ಮೇಲ್ಮನೆಯ ಒಬ್ಬರು ಹಾಲಿ ಸದಸ್ಯರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂತಾಪ ವ್ಯಕ್ತ ಮಾಡತಕ್ಕಂಥ ಅವಕಾಶವನ್ನು ತಾವು ಕಲ್ಪಿಸಿ ಕೊಟ್ಟಿದ್ದೀರಿ.

ಮೊದಲನೆಯದಾಗಿ, ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು, ಸಮಾಜದ ಅನೇಕ ಕ್ಷೇತ್ರಗಳಲ್ಲಿ ಸೇವೆಯನ್ನು ಮಾಡಿದಂಥ ಒಬ್ಬ ಆದರ್ಶ ನಾಯಕ ಎಂದು ಈ ಸಂದರ್ಭದಲ್ಲಿ ನೆನೆದುಕೊಳ್ಳಲು ನಾನು ಇಚ್ಛೆಪಡುತ್ತಿದ್ದೇನೆ. ಅವರು ವಿಧಾನಸಭೆಯಲ್ಲಿ ಸದಸ್ಯರಾಗಿದ್ದರು. ಮೇಲ್ಮನೆಯಲ್ಲೂ ಸಹ 2 ಬಾರಿ ಸದಸ್ಯರಾಗಿದ್ದರು. ಅವರು ತಮ್ಮ ಜೀವನದುದ್ದಕ್ಕೂ ಕೂಡ ಗಾಂಧಿವಾದಿಯಾಗಿ ಬದುಕಿದ್ದರು. ಅವರು ಸರಳವಾದಂಥ ಜೀವನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ತಮ್ಮ ಉಸಿರಿರುವ ಕೊನೆಯ ಘಳಿಗೆಯವರೆಗೆ ಕೂಡ ಗಾಂಧಿವಾದದಲ್ಲಿ, ಅವರ ಕಾರ್ಯತತ್ವದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡು ಬದುಕಿದಂಥ ಒಬ್ಬ ಮಹಾನ್ ನಾಯಕ ಎಂದು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಅದಕ್ಕಾಗಿ ಜೈಲುವಾಸ ಅನುಭವಿಸಿದಂಥವರು ಅವರು. ಬಹಳ ಮುಖ್ಯವಾಗಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದಂಥ ಕೆಲಸವನ್ನು ಮಾಡಿದ್ದಾರೆ. ಮಲೆನಾಡು ವಿದ್ಯಾ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಲೋಕ ಶಿಕ್ಷಣ ಸಂಸ್ಥೆಯ, ಸಂಯುಕ್ತ ಕರ್ನಾಟಕ ಪತ್ರಿಕೆಯ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿ ಆ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ಕೊಡತಕ್ಕಂಥ, ಪತ್ರಿಕೋದ್ಯಮದ ಮೌಲ್ಯಗಳನ್ನು ಎತ್ತಿ ಹಿಡಿಯತಕ್ಕಂಥ ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನೂ ಕೂಡ ಅವರು ಮಾಡಿದ್ದಾರೆ. ಅವರು ಶಾಸಕರಾಗಿದ್ದಾಗ ನಾನು ಇಲ್ಲಿ ಇರಲಿಲ್ಲ. ಅವರು 1978ರಿಂದ 1983ರವರೆಗೆ ಇಲ್ಲಿ ಶಾಸಕರಾಗಿದ್ದರು. ನಾವು ಇಲ್ಲಿಗೆ 1983ರ ನಂತರ ಬಂದಂಥದವರು. ಈ ಮಧ್ಯೆ 2 ಬಾರಿ ಅವರು ಮೇಲ್ಮನೆಯ ಸದಸ್ಯರಾಗಿದ್ದರು. ಅವರು ಒಮ್ಮೆ ಇಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ಈ ರಾಜ್ಯದ ಸೇವೆಯನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಅವರು ಸ್ವತ: ವಕೀಲರಾಗಿದ್ದರು, ಕಾನೂನಿನ Professor ಆಗಿದದರು. ಸಂವಿಧಾನ ಮತ್ತು ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ಕಾನೂನು ಕಾಲೇಜಿನಲ್ಲಿ ಸ್ವತ: ಅವರು ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಹಾಗಾಗಿ, ಅವರು ಕಾನೂನು ತಜ್ಞರು ಕೂಡ ಆಗಿದ್ದರು. ಬಹಳ ಮುಖ್ಯವಾಗಿ ಅವರು ರಾಜ್ಯದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಒಂದು

ಪ್ರಮುಖವಾದಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಯಾವ್ಯಾವ ಭಾಗಗಳಲ್ಲಿ ಆಡಳಿತ ಸುಧಾರಣೆಯಾಗಬೇಕು, ಆಡಳಿತದಲ್ಲಿ ಅನಗತ್ಯ ವೆಚ್ಚವನ್ನು ಯಾವ ರೀತಿ ಕಡಿಮೆ ಮಾಡಬೇಕು, ರಾಜ್ಯದಲ್ಲಿ resources ಅನ್ನು ಹೆಚ್ಚು mobilize ಮಾಡಬೇಕಾದರೆ ಏನು ಮಾಡಬೇಕು, ಆಡಳಿತ ಜನರ ಬಳಿ ಹೋಗಬೇಕಾದರೆ, ಪರಿಣಾಮಕಾರಿಯಾಗಿರಬೇಕಾದರೆ ಸರ್ಕಾರ ಯಾವ ರೀತಿ ಕೆಲಸ ಮಾಡಬೇಕನ್ನತಕ್ಕಂಥ ಅನೇಕ ವಿಚಾರಗಳಲ್ಲಿ ಬಹಳ ಪ್ರಾಮುಖ್ಯವಾದ ವರದಿಯನ್ನು ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದು ಇವತ್ತಿಗೂ ಕೂಡ ಆಡಳಿತ ನಡೆಸತಕ್ಕಂಥವರಿಗೆ, ಆಡಳಿತದಲ್ಲಿ ಬದಲಾವಣೆಯನ್ನು ತರಬೇಕೆನ್ನುವುದಕ್ಕೆ, ಆಡಳಿತದಲ್ಲಿ ಪಾರದರ್ಶಕವನ್ನು ತರಬೇಕೆನ್ನತಕ್ಕಂಥದ್ದಕ್ಕೆ ಬಹಳ ಉಪಯೋಗವಾಗುತ್ತದೆ ಎನ್ನುವುದು ನನ್ನ ಭಾವನೆ. ನಾನೂ ಕೂಡ ಆ ವರದಿಯನ್ನು ಓದಿದ್ದೇನೆ. ಅವರು ಸರ್ಕಾರದಲ್ಲಿದ್ದು, ಶಾಸಕರಾಗಿ, ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿ, ಜನರ ನಡುವೆ ಕೆಲಸ ಮಾಡಿ ಎಲ್ಲ ಅನುಭವಗಳನ್ನೂ ಕೂಡ ಆ ವರದಿಯಲ್ಲಿ ಅವರು ತಂದಿದ್ದಾರೆನ್ನುವುದನ್ನು ನಾನಿವತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ಆ ವರದಿ ಅತ್ಯಂತ ಉಪಯುಕ್ತವಾಗುತ್ತದೆ. ಇವತ್ತು ಮತ್ತು ಮುಂದೆಯೂ ಕೂಡ ಸರ್ಕಾರ ಬಳಸಿಕೊಳ್ಳಲಿಕ್ಕೆ ಅದು ಅತ್ಯಂತ ಪ್ರಸ್ತುತ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಂಥ ಒಬ್ಬ ಅಪ್ಪಟ ಗಾಂಧಿವಾದಿ, ಜೀವನದಲ್ಲಿ ಆದರ್ಶಗಳನ್ನು ಅಳವಡಿಸಿಕೊಂಡು, ಮೌಲ್ಯಗಳಲ್ಲಿ ಯಾವತ್ತೂ ಕೂಡ ರಾಜಿ ಮಾಡಿಕೊಳ್ಳದೆಯೇ ಬದುಕಿದ್ದಂಥ ಒಬ್ಬ ವ್ಯಕ್ತಿ ಎಂದು ಹೇಳಬೇಕಾಗುತ್ತದೆ. ಇವತ್ತು ಗಾಂಧಿವಾದಿಗಳನ್ನು ಒಬ್ಬೊಬ್ಬರನ್ನಾಗಿ ನಾವು ಕಳೆದುಕೊಳ್ಳುತ್ತಿದ್ದೇವೆ. ಆ ಕೊಂಡಿ ಇವತ್ತು ಕಡಿಮೆಯಾಗುತ್ತಾ ಇದೆ. ಅವರು ಬದುಕಿದ ರೀತಿ ಅವರು ಅವರ ಜೀವನದಲ್ಲಿ ಅಳವಡಿಸಿಕೊಂಡಿದ್ದಂತಹ ಮೌಲ್ಯಗಳು, ಇಂಥವರ ಆದರ್ಶಗಳು ಇವತ್ತಿಗೆ ಮತ್ತು ಇನ್ನೂ ಅನೇಕ ವರ್ಷಗಳಿಗೆ ಯುವಕರಿಗೆ, ನಮಗೆ, ಮುಂದಿನ ಪೀಳಿಗೆಗೆ ಮಾದರಿಯಾಗುತ್ತದೆನ್ನುವ ಮಾತನ್ನು ಈ ಸಂಧರ್ಭದಲ್ಲಿ ಹೇಳುತ್ತಾ, ಅಂಥ ಒಬ್ಬ ವ್ಯಕ್ತಿಯನ್ನು ನಾವು ದಿ:4.04.2009ರಂದು ಕಳೆದುಕೊಂಡಿದ್ದೇವೆ. ಇಡೀ ರಾಜ್ಯಕ್ಕೆ ಅವರ ನಿಧನದಿಂದ ದೊಡ್ಡ ನಷ್ಟವುಂಟಾಗಿದೆ. ನಮ್ಮೆಲ್ಲರಿಗೂ ಕೂಡ ನಷ್ಟವುಂಟಾಗಿದೆ. ಅವರು ಅಪ್ಪಟ ಕಾಂಗ್ರೆಸಿಗರೂ ಕೂಡ ಆಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಕೊನೆಯವರೆಗೂ ಕೂಡ ಕಾಂಗ್ರೆಸ್‌ನಲ್ಲಿದ್ದುಕೊಂಡು ಕಾಂಗ್ರೆಸ್‌ನ ಅನುಯಾಯಿಯಾಗಿ, ಮಾರ್ಗದರ್ಶಕರಾಗಿದ್ದರು. ರಾಜಕೀಯದಲ್ಲಿದ್ದಂತಹ ಅನೇಕ ಜನರಿಗೆ ಮಾರ್ಗದರ್ಶನವನ್ನು ಮಾಡುವ ಕೆಲಸವನ್ನು ಕೂಡ ಅವರು ಮಾಡಿಕೊಂಡು ಬಂದಿದ್ದರು. ಹಾಗಾಗಿ, ಅವರ ನಿಧನ ಕಾಂಗ್ರೆಸ್ ಪಕ್ಷಕ್ಕೂ ಕೂಡ ದೊಡ್ಡ ನಷ್ಟವಾಗಿದೆ ಮತ್ತು ಸಮಾಜಕ್ಕೆ, ನಾಡಿಗೆ ಕೂಡ ದೊಡ್ಡ ನಷ್ಟವಾಗಿದೆ. ಅಂಥ ವ್ಯಕ್ತಿಯನ್ನು ನಾವು

ಕಳೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಹಾಗೆಯೇ, ಇದಿನಬ್ಬರವರು ನಮ್ಮ ಜೊತೆಯಲ್ಲಿ ಇಲ್ಲಿ ಶಾಸಕರಾಗಿದ್ದರು. ಇವರು ಉಳ್ಳಾಲ ಕ್ಷೇತ್ರದಿಂದ ಮೂರು ಬಾರಿ ಆ ಕ್ಷೇತ್ರವನ್ನು ಪ್ರತಿನಿಧಿಸಿ, ಕರ್ನಾಟಕ ವಿಧಾನಸಭೆಯಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಸಾಹಿತ್ಯದಲ್ಲಿ ಅಪಾರವಾದ ಅಭಿರುಚಿ ಇತ್ತು, ಕನ್ನಡದಲ್ಲಿ ಅವರು ಬಹಳಷ್ಟು ಸಾಹಿತ್ಯ ರಚನೆ ಮಾಡಿದ್ದರು. ಕನ್ನಡದ ಬಗ್ಗೆ ಅಪಾರವಾದಂಥ ಅಭಿಮಾನವನ್ನಿಟ್ಟುಕೊಂಡಿದ್ದರು. ಅವರು ಸ್ವತ: ಕವಿಯಾಗಿದ್ದರು. ನಾವು Treasury Bench ನಲ್ಲಿದ್ದಾಗ ಅವರು ಅಲ್ಲಿ ಕುಳಿತಿದ್ದರು. ವಿಧಾನ ಸಭೆಯಲ್ಲಿ ಅನೇಕ ವಿಷಯಗಳು ಚರ್ಚೆಗೆ ಬಂದಾಗ, ಕನ್ನಡ ಮಾತೃ ಭಾಷೆಯಾಗಿರುವವರು ಕೂಡ ಅಷ್ಟೊಂದು ಸ್ಪಷ್ಟವಾಗಿ ಇದಿನಬ್ಬರವರು ಮಾತನಾಡುವ ಹಾಗೆ ಮಾತನಾಡುತ್ತಿರಲಿಲ್ಲ. ಅಷ್ಟರಮಟ್ಟಿಗೆ ಕನ್ನಡದಲ್ಲಿ ಅವರಿಗೆ ಪರಿಶ್ರಮವಿತ್ತು, ಪ್ರೌಢಿಮೆ ಇತ್ತು. ಅವರು ಅನೇಕ ಸಾಹಿತ್ಯ ರಚಿಸಿದ್ದು, ಪುಸ್ತಕಗಳನ್ನು ಬರೆದಿರುವುದು, ಕೃತಿಗಳನ್ನು ರಚನೆ ಮಾಡಿರುವುದು ಇದೆ. ಅವರು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಹಳ ವರ್ಷ ಕೆಲಸ ಮಾಡಿದ್ದಾರೆ. ಅವರ ಸಾಹಿತ್ಯ ಅಭಿರುಚಿಯನ್ನು ನೋಡಿ ಆ ಭಾಗದ ಜನರು ಹರ್ಷ ವ್ಯಕ್ತಪಡಿಸಿದ್ದಾರೆ. ಅವರು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆಯನ್ನು ನೀಡಿದ್ದಾರೆ. ಅದರ ಜೊತೆಗೆ, ಕಾಂಗ್ರೆಸ್ ಸರ್ಕಾರ ಇದ್ದಾಗ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿದ್ದರು. 1983ರಲ್ಲಿ ಕರ್ನಾಟಕದಲ್ಲಿ ಮೊದಲನೇ ಬಾರಿಗೆ ಕನ್ನಡ ಕಾವಲು ಸಮಿತಿಯ ಸಮಿತಿಯ ಅಧ್ಯಕ್ಷನನ್ನಾಗಿ ನನ್ನನ್ನು ನೇಮಿಸಿದ್ದರು. ಆ ಸಮಿತಿಗೆ ನಾನು ಮೊದಲನೇ ಅಧ್ಯಕ್ಷನಾಗಿದ್ದೆ. ಅದು ಆದಮೇಲೆ ಅದರ ಹೆಸರು ಬದಲಾವಣೆಯಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿ ಅದಕ್ಕೆ ಇನ್ನೂ ಹೆಚ್ಚು ವಿಸ್ತಾರವಾಗಿ ಅಧಿಕಾರ ಕೊಟ್ಟು, ಅದರ ಕ್ಷೇತ್ರ ವಿಸ್ತಾರ ಮಾಡಿ ಅದಕ್ಕೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಈಗ ಮೇಲ್ಮನೆ ಸದಸ್ಯರಾಗಿರುವಂಥ ಮಾನ್ಯ ಮುಖ್ಯಮಂತ್ರಿ ಚಂದ್ರುರವರು ಇದಕ್ಕೆ ಅಧ್ಯಕ್ಷರಾಗಿದ್ದಾರೆ. ಇದಿನಬ್ಬರವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಆಡಳಿತದಲ್ಲಿ ಕನ್ನಡ ಇರಬೇಕೆನ್ನುವುದರ ಬಗ್ಗೆ ಬಹಳಷ್ಟು ಶ್ರಮವನ್ನು ಪಟ್ಟಿದ್ದಾರೆ. ಅನೇಕ ಶಿಫಾರಸುಗಳನ್ನು, ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇವತ್ತಿಗೂ ಅವು ಬಹಳ ಪ್ರಸ್ತುತ. ಇವತ್ತು ಆಡಳಿತದಲ್ಲಿ ಇನ್ನೂ ಸಂಪೂರ್ಣವಾಗಿ ಕನ್ನಡ ಬಳಕೆಯಾಗಿಲ್ಲವೆನ್ನುವುದನ್ನು ಕೂಡ ನಾವು ನೋಡುತ್ತಿದ್ದೇವೆ. 1984ರಿಂದ ಇವತ್ತಿನವರೆಗೆ ಅನೇಕ circular ಗಳು ಹೊರಟಿದ್ದರೂ ಕೂಡ ಕನ್ನಡ ರಾಜ್ಯದ ಆಡಳಿತದ ಭಾಷೆಯಾಗಿಲ್ಲ. ಮಾನ್ಯ ಮುಖ್ಯಮಂತ್ರಿ ಚಂದ್ರುರವರು ಇವತ್ತಿಗೂ ಕೂಡ ಅನೇಕ ಅಧಿಕಾರಿಗಳು ಕನ್ನಡವನ್ನು ಬಳಸುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈ ಕೂಗನ್ನು ಅವರೂ ಕೂಡ ಅನೇಕ ಸಲ ವಿಧಾನಸಭೆ ಒಳಗಡೆ, ಹೊರಗಡೆ ಮಾಡಿದ್ದರು. ಇವತ್ತು ಕನ್ನಡ ಆಡಳಿತ

ಭಾಷೆಯಾಗಬೇಕೆನ್ನುವುದರ ಬಗ್ಗೆ ಅಪಾರವಾದ ಕಾಳಜಿಯನ್ನಿಟ್ಟುಕೊಂಡು ಅದರ ಅಗತ್ಯತೆ ಎಷ್ಟಿದೆ ಎನ್ನುವುದನ್ನು ಕೂಡ ತಿಳಿದುಕೊಂಡಿದ್ದರಿಂದ ಅವರು ಬಹಳಷ್ಟು ಶಿಫಾರಸುಗಳನ್ನು ಮಾಡಿದ್ದರು. ಅನೇಕ ಪ್ರಶಸ್ತಿಗಳೂ ಕೂಡ ಅವರಿಗೆ ಸಿಕ್ಕಿವೆ. ಅವರ ಕನ್ನಡ ಸಾಹಿತ್ಯಕ್ಕೆ 2–3 ಪ್ರಶಸ್ತಿಗಳು ಅವರಿಗೆ ಸಿಕ್ಕಿವೆ. ಕನ್ನಡ ರಾಜ್ಯೋತ್ಸವ, ಗೊರೂರು, ಅತ್ತಿಮಬ್ಬೆ ಪ್ರಶಸ್ತಿಗಳು ಹೀಗೆ ಅವರು ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಕ್ಕೆ ಕೂಡ ಒಳಗಾಗಿದ್ದರು. ಹಾಗಾಗಿ, ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದ್ದ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇವರೂ ಕೂಡ ಗಾಂಧಿವಾದಿಯಾಗಿದ್ದರು. ಬಹಳ ಸರಳವಾಗಿರುತ್ತಿದ್ದರು. ಗಾಂಧೀಜಿಯವರ ವಿಷಯದಲ್ಲಿ ಬಹಳಷ್ಟು ನಂಬಿಕೆ ಇಟ್ಟುಕೊಂಡಿದ್ದರು. ಅಂಥವರನ್ನು ನಾವು ಕಳೆದುಕೊಂಡಿದ್ದೇವೆ. ಅವರು ದಿ:11–04–2009ರಂದು ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಈ ಸಂಧರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಸುದೇವರವರು ನಮ್ಮ ಮೈಸೂರಿನವರು. ಅವರು 1983ರಲ್ಲಿ ಟಿ. ನರಸೀಪುರ ಕ್ಷೇತ್ರದಿಂದ ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ಕ್ರಾಂತಿರಂಗ ಪಕ್ಷದಿಂದ ಗೆದ್ದು ಆನಂತರ ಜನತಾ ಪಕ್ಷಕ್ಕೆ ಬಂದು ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ನಂತರ, ಮಧ್ಯಂತರ ಚುನಾವಣೆಯಾದ ಮೇಲೆ ಹೆಚ್.ಸಿ. ಮಹದೇವಪ್ಪನವರು ಆ ಕ್ಷೇತ್ರದಿಂದ M.L.A. ಆದರು ಅದಕ್ಕೆ ಮೊದಲು ಅವರು ಎರಡು ವರ್ಷಗಳ ಕಾಲ ಶಾಸಕರಾಗಿದ್ದರು. ಅವರು ಯಾವಾಗಲೂ ಕೂಡ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಸಾಮಾಜಿಕ ನ್ಯಾಯದಿಂದ ವಂಚಿತರಾದವರ ಪರವಾಗಿ ಹೋರಾಟ ಮಾಡುತ್ತಿದ್ದರು, ಸಂಘಟನೆ ಮಾಡತಕ್ಕಂಥಹ ಕೆಲಸವನ್ನು ಅವರು ಮಾಡುತ್ತಿದ್ದರು. ಆದರೆ, ಅವರು ಬಹಳ ಚಿಕ್ಕವಯಸ್ಸಿನಲ್ಲಿಯೇ ಕಾಲವಾಗಿದ್ದರೆ. ಅವರು ನಮಗೆಲ್ಲರಿಗೂ ಒಳ್ಳೆಯ ಸ್ನೇಹಿತರಾಗಿದ್ದರು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಅವರು ದಿ:13–04–2009ರಂದು ನಮ್ಮನ್ನೆಲ್ಲ ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಜಿ. ಶಂಕರೇಗೌಡರವರು ಹೊಸಪೇಟೆ ಕ್ಷೇತ್ರದಿಂದ ಎರಡು ಸಲ ಅಂದರೆ, 1983ರಲ್ಲಿ ಒಂದು ಸಾರಿ ಮತ್ತು ಅಮೇಲೆ ಇನ್ನೊಂದು ಸಾರಿ ಆಯ್ಕೆಯಾಗಿದ್ದರು. ಅವರು ಶಿಕ್ಷಣ ಸಂಸ್ಥೆಗಳಲ್ಲಿ ಅಪಾರವಾಗಿ ಕೆಲಸ ಮಾಡಿದಂಥವರು. ಅವರು ಬಹಳ ಸಜ್ಜನ ವ್ಯಕ್ತಿಯಾಗಿದ್ದರು. ಅವರು ಎಂ.ಎಲ್.ಎ.ಯಾಗಿ ನಮ್ಮ ಜೊತೆಯಲ್ಲಿದ್ದರು. ಅವರು ಬಹಳ ಕಡಿಮೆ ಮಾತನಾಡುತ್ತಿದ್ದರು. ಅವರು ಒಬ್ಬ ಹೋರಾಟಗಾರರು. ಎಲ್ಲದಕ್ಕಿಂತ ಹೆಚ್ಚಾಗಿ ರೈತಪರವಾದಂಥಹ ಹೋರಾಟ ಮಾಡುತ್ತಿದ್ದರು. ಹೊಸಪೇಟೆ ಮತ್ತು ಆ ಭಾಗದಲ್ಲಿ ರೈತರ ಪರವಾಗಿ, ಕಬ್ಬು ಬೆಳೆಗಾರರ ಪರವಾಗಿ ಹೋರಾಟ ಮಾಡುತ್ತಿದ್ದರು ಮತ್ತು ಒಬ್ಬ ರೈತ ಪರವಾಗಿ ಕಾಳಜಿ ಇಟ್ಟುಕೊಂಡಿದ್ದವರು,

ಕ-ಆಡಿ-೦

ಗ್ರಾಮೀಣ ಜನರ ಬದುಕಿನ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎಂ.ಬಿ. ದಿವಟರ್‌ರವರು ಕೊಪ್ಪಳ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದರು. ನಾವು ಶಾಸನ ಸಭೆಯಲ್ಲಿದ್ದಾಗ ಅವರೂ ಕೂಡ ಇಲ್ಲಿದ್ದರು. ಅವರು ಬಹಳ ಒಳ್ಳೆಯ ಮನುಷ್ಯರು. ಅವರು ಮಿತಭಾಷಿಯಾಗಿದ್ದರು. ಅವರು ಸ್ನೇಹಮಹಿಯಾಗಿದ್ದರು ಮತ್ತು ಜನಪರ ಕಾಳಜಿ ಇಟ್ಟುಕೊಂಡಿದ್ದರು. ಅವರೂ ಕೂಡ ನಮ್ಮನ್ನಗಲಿದ್ದು ದಿನಾಂಕ 26.05–2009ರಲ್ಲಿ ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಕೂಡ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

ಬಿ.ಪಿ.ಗಂಗಾಧರ್‌ರವರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನವರು. ಅವರು ಒಂದು ಸಲ ವಿಧಾನಸಭೆಯ ಸದಸ್ಯರಾಗಿದ್ದರು. ಅವರು ಸಮಾಜವಾದಿ ಪಕ್ಷದಲ್ಲಿದ್ದು ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದವರು. ನಾನು ಅನೇಕ ಸಲ ಅವರನ್ನು ಭೇಟಿಯಾಗಿದ್ದೇನೆ. ಸಮಾಜವಾದದಲ್ಲಿ ಅವರು ಅಪಾರವಾದ ನಂಬಿಕೆಯನ್ನಿಟ್ಟುಕೊಂಡು ಪ್ರಮಾಣಿಕವಾಗಿ ಇದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಜೊತೆಗೆ ಅವರು ವಕೀಲಿ ಕೆಲಸವನ್ನು ಕೂಡ ತುಮಕೂರಿನಲ್ಲಿ ಮಾಡುತ್ತಿದ್ದರು. ಅವರು ವಿಧಾನಸಭಾ ಸದಸ್ಯರಾಗಿದ್ದಾಗ ಮೈಸೂರು ವಿಧಾನಸಭೆ ಎನ್ನುವುದು ಕರ್ನಾಟಕ ವಿಧಾನಸಭೆ ಎಂದಾಗಬೇಕು ಮತ್ತು ಮೈಸೂರು ರಾಜ್ಯ ಎಂದಿರುವುದು ಕರ್ನಾಟಕ ಎಂದಾಗಬೇಕು ಎನ್ನುವ ಬಗ್ಗೆ ವಿಧಾನಸಭೆಯಲ್ಲಿ ಬಹಳ ದೀರ್ಘವಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಇವತ್ತು ಏನಾದರೂ ಕರ್ನಾಟಕ ವಿಧಾನಸಭೆ ಎಂದು ನಾಮಕರಣವಾಗಿದ್ದರು, ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಆಗಿದ್ದರು ಅದಕ್ಕೆ ಅವರೂ ಕಾರಣ ಮತ್ತು ಅವರು ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದ ವ್ಯಕ್ತಿಯಾಗಿದ್ದರು. ಅವರು ಎಲ್ಲಾ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ ಕರ್ನಾಟಕ ಎಂದು ನಾಮಕರಣವಾಗಲಿಕ್ಕೆ, ಕರ್ನಾಟಕ ವಿಧಾನಸಭೆ ಎಂದು ಆಗಲಿಕ್ಕೆ ಅವರು ಕೊಡುಗೆಯೂ ಇದೆ ಎಂದು ನಾನು ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲಿಕ್ಕೆ ಬಯಸುತ್ತೇನೆ. ಅವರು ನಮ್ಮನ್ನು ಆಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಬಿ.ಟಿ. ಚನ್ನಬಸಪ್ಪರವರು ಎರಡು ಬಾರಿ ಮೇಲ್ಮನೆ ಸದಸ್ಯರಾಗಿದ್ದರು. ಅವರು 2004ರಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಕೆಲಸ ಮಾಡುತ್ತಿದ್ದರು. ಅವರು sitting member ಆಗಿದ್ದರು. ಅವರ ವಯಸ್ಸು ಇನ್ನೂ ಚಿಕ್ಕದಿತ್ತು. ಅವರು ಸುಮಾರು ತಮ್ಮ 50ನೇ ವಯಸ್ಸಿನಲ್ಲಿ ತೀರಿ ಹೋಗಿದ್ದಾರೆ. ಅವರು ಬಹಳ ಸಜ್ಜನ ವ್ಯಕ್ತಿ. ಅವರು ತಮ್ಮನ್ನು ವಾಣಿಜ್ಯೋದ್ಯಮದಲ್ಲೂ ಕೂಡ ತೊಡಗಿಸಿಕೊಂಡಿದ್ದರು.

ನಮ್ಮ ಜೊತೆ ಅವರು ಮೊದಲನೇ ಬಾರಿ ಶಾಸಕರಾಗಿದ್ದರು. ನಾನು ಜನತಾ ಪಾರ್ಟಿಯಲ್ಲಿದ್ದಾಗ ಅವರು ಮೇಲ್ಮನೆ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಅವರು ಈಗ ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಅವರಿಗೂ ಕೂಡ ಅನೇಕ ಪ್ರಶಸ್ತಿಗಳು ದೊರಕಿವೆ. ನಾವು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಮತ್ತು ಎಲ್ಲರಿಗೂ ಕೂಡ ಚಿರಶಾಂತಿ ದೊರಕಲಿ ಮತ್ತು ಅವರ ಕುಟುಂಬವರ್ಗದವರಿಗೆ ಇವರ ಸಾವಿನ ದು:ಖವನ್ನು ಭರಿಸುವ ಶಕ್ತಿ ಬರಲೆಂದು ಹೇಳುತ್ತಾ, ನಿಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರಾದ ಹಾರ್ನಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾದ ಬಿ.ಎಂ. ಇದಿನಬ್ಬ, ವಾಸುದೇವ. ಜಿ. ಶಂಕರೇಗೌಡ, ಎಂ.ಬಿ. ದಿವಟರ, ಬಿ.ಪಿ.ಗಂಗಾಧರ, ಮತ್ತು ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಚನ್ನಬಸಪ್ಪ ಇವರ ನಿಧನಕ್ಕೆ ಖಿಷಾದ ವ್ಯಕ್ತಪಡಿಸುತ್ತೇನೆ. ಸನ್ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಹಾಸನ ಜಿಲ್ಲೆಯವರು. ಅವರು ಸ್ವಾತಂತ್ರ್ಯಯ ಹೋರಾಟಗಾರರಾಗಿದ್ದರು ಮತ್ತು ಅವರು ಹಲವಾರು ವಿದ್ಯಾ ಕ್ಷೇತ್ರಗಳಲ್ಲಿ ತೊಡಗಿದ್ದರು. ವಕೀಲ ವೃತ್ತಿಯಿಂದ ಪ್ರಾರಂಭ ಮಾಡಿ 1960ರಿಂದ 66ರ ವರೆಗೆ ಮತ್ತು 1990ರಿಂದ 1992ರ ವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. 1972ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ, ಮುಜರಾಯಿ ಇಲಾಖಾ ಸಚಿವರಾಗಿ 2000ನೇ ಇಸವಿಯಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅವರು ಉತ್ತಮ ಹೋರಾಟಗಾರರಾಗಿದ್ದರು ಮತ್ತು ಪಕ್ಷಾತೀತವಾಗಿದ್ದಂಥ ಧುರೀಣರಲ್ಲಿ ಹಾರ್ನಳ್ಳಿ ರಾಮಸ್ವಾಮಿಯವರು ಸಹ ಒಬ್ಬರಾಗಿದ್ದರು ಎಂದು ಹೇಳಬೇಕಾಗುತ್ತದೆ. ಅವರ ನಿಧನ ನಮ್ಮ ಜಿಲ್ಲೆಗೆ, ರಾಜ್ಯಕ್ಕೆ, ರಾಜ್ಯದ ಜನತೆಗೆ ಅಗಾಧವಾದ ನೋವನ್ನುಂಟುಮಾಡಿದೆ. ಅದರ ಜೊತೆಗೆ ಇದಿನಬ್ಬರವರು 1920ರಲ್ಲಿ ಜನಿಸಿ ಮೈಸೂರು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕ ಸಮಾಜದ ಮಾರಾಟ ಸಹಕಾರ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸ್ತುತ ಸಾಹಿತಿಗಳಾಗಿದ್ದವರು ಮತ್ತು ವಿಧಾನಸಭಾ ಸದಸ್ಯರಾಗಿ ಇವರು ಹಲವಾರು ಸಾಹಿತ್ಯವನ್ನು ನಿರ್ಮಿಸಿದ್ದರು. ಅವರ ನಿಧನಕ್ಕೆ ಮತ್ತು ವಾಸುದೇವರರವರು ಮೈಸೂರು ಜಿಲ್ಲೆಯವರು, ಶಂಕರೇಗೌಡರು, ದಿವಟರ್‌ರವರು, ಗಂಗಾಧರ, ಎರಡು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಚನ್ನಬಸಪ್ಪರವರುಗಳು ನಿಧನ ಹೊಂದಿದ್ದು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಅವರ ಕುಟುಂಬ ವರ್ಗಕ್ಕೆ ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿ ಸಿಗಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್(ಹುಬ್ಬಳ್ಳಿ ಧಾರವಾಡ ಪಶ್ಚಿಮ): ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚಕ ನಿರ್ಣಯ ತಂದಿದ್ದಕ್ಕೆ ಮತ್ತು ನನಗೆ

ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇವತ್ತಿನ ದಿವಸ ನಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ಮತ್ತು ಅನೇಕ ಸದಸ್ಯರು ಈಗಾಗಲೇ ಸನ್ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ ಬಗ್ಗೆ ಅನೇಕ ವಿಚಾರಗಳನ್ನು ಸಭೆಯ ಮುಂದೆ ಹೇಳಿದ್ದಾರೆ. ರಾಮಸ್ವಾಮಿಯವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವರು ತಮ್ಮ ಇಡೀ ಜೀವನವನ್ನೇ ಗಾಂಧೀಜಿಯವರ ತತ್ವ ಸಿದ್ಧಾಂತಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾರ್ಯ ನಿರ್ವಹಿಸಿದ್ದವರು. ಈ ವಿಧಾನಸಭೆಯ ಸದಸ್ಯರಾಗಿ, ಮಂತ್ರಿಯಾಗಿ, ಪ್ರಜಾತಂತ್ರ ಮತ್ತು ಜನತಂತ್ರದ ವಿಷಯವಾಗಿ ಸಾಕಷ್ಟು ಚಿಂತನೆಯನ್ನು ಮಾಡಿದ ಒಬ್ಬ ಚಿಂತಕರು. ಪ್ರಜಾತಂತ್ರದ ಬಗ್ಗೆ ಬಹಳ ಗಟ್ಟಿಯಾಗಿ ಆಡಳಿತ ಸುಧಾರಣೆ ಬಗ್ಗೆ ಬಹಳ ಉತ್ತಮವಾದ ವರದಿಯನ್ನು ಸಹ ಅವರು ಕೊಟ್ಟಿದ್ದಾರೆ. ಇವತ್ತಿನ ದಿವಸ ಅವರು ಕೊಟ್ಟಂಥ ವರದಿ ಬಹಳ ಮಹತ್ವದ್ದಾಗಿದೆ ಮತ್ತು ಆಡಳಿತ ಸುಧಾರಣೆ ಸಲುವಾಗಿ ಅದನ್ನು ಅನುಷ್ಠಾನದಲ್ಲಿ ತರಬೇಕಾದದ್ದು ಸಹ ಬಹಳ ಅಗತ್ಯವಾಗಿದೆ. ಅವರು ಒಬ್ಬ ಗಾಂಧಿವಾದಿಗಳಾಗಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿ ಅವರು ಸ್ವಾತಂತ್ರ್ಯ ಚಳುವಳಿ ಮೂಲಕ ಜೈಲುವಾಸ ಅನುಭವಿಸಿ ತಮ್ಮ ಇಡೀ 87 ವರ್ಷಗಳ ಜೀವನದಲ್ಲಿ ಅವರು ಕೊಟ್ಟಂಥ ಅನೇಕ ವಿಚಾರಗಳು ಇವತ್ತು ನಮಗಲ್ಲ, ಇಲ್ಲಿನವರೆಗೆ ಮತ್ತು ಮುಂದಿನ ಪೀಳಿಗೆಗೆ ಆದರ್ಶವಾಗಿರುತ್ತಾರೆ. ಜನತಂತ್ರದಲ್ಲಿ ಇಂಥ ಆದರ್ಶವಾಗಿ ಬದುಕಿ ನಮಗೆಲ್ಲ ಮಾರ್ಗದರ್ಶನ ಮಾಡಿದಂಥವರ ಆದರ್ಶವನ್ನು ನಮ್ಮ ಜೀವನದಲ್ಲಿ ನಾವು ಇಟ್ಟುಕೊಂಡು ಇವತ್ತು ಪ್ರಜಾತಂತ್ರವನ್ನು ಸರಿಯಾಗಿ ನಡೆಸಬೇಕಾದಂಥ ಅಗತ್ಯವಿದೆ. ಇವರು ಅನೇಕ ಸಂಘಸಂಸ್ಥೆಗಳ ಮೂಲಕ ತಮ್ಮ ಸೇವೆ ಮಾಡಿದ್ದಾರೆ. ಬಹಳ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಲನಾಡು ಭಾಗದಲ್ಲಿನ ತಮ್ಮ ಒಂದು ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ, ಶಿಕ್ಷಣದ ಉನ್ನತಿಗಾಗಿ ಮಕ್ಕಳ ಶಿಕ್ಷಣಕ್ಕಾಗಿ ಬಹಳ ದೊಡ್ಡ ಕಾರ್ಯ ಮಾಡಿದ್ದಾರೆ. ಶಾಸನ ಸಭೆಗೆ ಅವರು ನೀಡಿದಂಥ ಅನೇಕ ವರದಿಗಳಲ್ಲಿ ಅವರು ವಿಚಾರವನ್ನು ನಾವು ಇವತ್ತು ಮೆಲಕು ಹಾಕಿ ನೋಡಬೇಕಾದ ಅಗತ್ಯತೆ ಇದೆ. ಸಂಯುಕ್ತ ಕರ್ನಾಟಕ ಎನ್ನುವ ಪತ್ರಿಕೆ ಮೊಟ್ಟಮೊದಲು ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡಿದಂಥ ಪತ್ರಿಕೆ. ಇದು ಲೋಕ ಶಿಕ್ಷಣ ಟ್ರಸ್ಟ್‌ನ ಪತ್ರಿಕೆಯಾಗಿದ್ದು, ಉತ್ತಮವಾಗಿದ್ದು, ಇದರ ಬೆಳವಣಿಗೆಗೆ ಶ್ರೀಯುತರು ಸಾಕಷ್ಟು ಶ್ರಮಿಸಿದ್ದಾರೆ. ಅವರು ಯಾವತ್ತು ಪಕ್ಷಪಾತದಿಂದ ನಡೆದಂಥವರಲ್ಲ. ಕಾಂಗ್ರೆಸ್‌ನಲ್ಲಿದ್ದರೂ ಕೂಡ ಅಲ್ಲಿರುವಂಥ ಲೋಪದೋಷಗಳನ್ನು ಜನಗಳಿಗೆ ಎತ್ತಿ ತೋರಿಸುವಂಥ ಕೆಲಸ ಮಾಡಿದ್ದಾರೆ. ಜನತಂತ್ರದಲ್ಲಿ ಹೇಗೆ ನಡೆಯಬೇಕೆಂದು ಎಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ಅವರು ಒಂದು ಪಕ್ಷದಲ್ಲಿದ್ದರೂ ಪಕ್ಷಾತೀತವಾಗಿ ಎಲ್ಲಾ ಸಮಾಜದ ಒಳಿತಿಗಾಗಿ ಕೆಲಸ ಮಾಡಿದಂಥವರು. ಅವರು ಅನೇಕ ಪತ್ರಿಕಾ ಅಂಕಣಕಾರರಾಗಿ ಮತ್ತು ಜನವಾಣಿ ಪತ್ರಿಕೆಯ ಸಂಪಾದಕರಾಗಿ ಅವರು ಮಾಡಿದಂಥ ಕೆಲಸ ಇಡೀ

ಕರ್ನಾಟಕದ ಜನತೆಗೆ ಮತ್ತು ಜನತಂತ್ರ ವ್ಯವಸ್ಥೆಯಲ್ಲಿ ಇರುವಂಥ ನಮ್ಮಂಥ ಜನಪ್ರತಿನಿಧಿಗಳಿಗೆ ಹಾಗೂ ಸರ್ಕಾರ ನಡೆಸುವಂಥ ಅಧಿಕಾರಿಗಳಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವಂಥ ಅನೇಕ ಉತ್ತಮವಾದ ವಿಚಾರಗಳನ್ನು ಆಡಳಿತದಲ್ಲಿ ತಂದಿದ್ದಾರೆ. ಇವರ ಅಗಲಿಕೆ ಇಡೀ ಕರ್ನಾಟಕಕ್ಕೆ ತುಂಬಲಾರದ ನಷ್ಟವೆಂದು ಹೇಳಬಯಸುತ್ತೇನೆ.

ಅದರಂತೆ ಇನ್ನೊಬ್ಬ ಅದ್ವಿತೀಯ ಕನ್ನಡ ಭಾಷಾಭಿಮಾನಿ ಬಿ.ಎಂ.ಇದಿನಬ್ಬನವರು. ಇವರು ಮತ್ತು ನಾವು ಇದೇ ವಿಧಾನ ಸಭೆಯಲ್ಲಿ ಕಾರ್ಯ ಮಾಡಿದ್ದೇವೆ. ಇವರು ಬಹಳ ದೊಡ್ಡ ಕನ್ನಡದ ಅಭಿಮಾನಿ ಮತ್ತು ಕನ್ನಡ ಭಾಷೆಯ ಬಗ್ಗೆ ಅಸ್ಖಲಿತವಾಗಿ ಮಾತನಾಡುವಂಥದವರು. ಇವರು ಅನೇಕ ಸಾಹಿತ್ಯಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತ್ಯವೂ ಸೇರಿದಂತೆ ಎಲ್ಲಾ ರಂಗದಲ್ಲೂ ಅವರು ಸಾಹಿತ್ಯವನ್ನು ರಚಿಸಿದ್ದಾರೆ. ಇವರು ಅಪ್ಪಟ ಗಾಂಧಿವಾದಿಗಳು, ತತ್ವಕ್ಕೆ ಬದ್ಧರಾಗಿದ್ದವರು, ಯಾವಾಗಲೂ ಖಾದಿ ವೇಷದಲ್ಲಿರುವಂಥವರು. ಅವರು ಮಾತನಾಡುವ ಶೈಲಿಯೂ ಸಹಿತ ಅಪ್ರತಿಮ. ವಿಧಾನ ಸಭೆಯಲ್ಲಿ ಅವರು ಅಪ್ರತಿಮವಾಗಿ ಕನ್ನಡದಲ್ಲಿ ಭಾಷಣ ಮಾಡುತ್ತಿದ್ದರು. ಅವರಿಗೆ ಕುವೆಂಪುರವರ ಬಗ್ಗೆ ಬಹಳ ದೊಡ್ಡ ಅಭಿಮಾನ ಇತ್ತು. ಕುವೆಂಪುರವರ ಎಲ್ಲಾ ವಿಚಾರಗಳನ್ನು ಈ ಸಭೆಯಲ್ಲಿ ಅನೇಕ ಸಲ ವ್ಯಕ್ತಪಡಿಸಿದ್ದುಂಟು. ಅವರು ಕನ್ನಡ ಪ್ರಾದಿಕಾರದ ಅಧ್ಯಕ್ಷರಾಗಿದ್ದರು. ಈಗಾಗಲೇ ಅನೇಕ ಜನ ಹೇಳಿದಂತೆ ಅವರು ಕನ್ನಡ ಪ್ರಾದಿಕಾರದ ಅಧ್ಯಕ್ಷರಾಗಿದ್ದಾಗ ಕನ್ನಡದ ಬೆಳೆವಣಿಗೆಯ ಬಗ್ಗೆ, ಆಡಳಿತದಲ್ಲಿ ಕನ್ನಡ ಜಾರಿಗೆ ತರುವ ಬಗ್ಗೆ, ಅನೇಕ ಉತ್ತಮವಾದ ವಿಚಾರಗಳನ್ನು ಕೊಟ್ಟಂಥ ಒಬ್ಬ ಆದರ್ಶ ವ್ಯಕ್ತಿ. ಇವರನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ತುಂಬಲಾರದ ನಷ್ಟ. ಅದರಲ್ಲೂ ಬಹಳ ಮುಖ್ಯವಾಗಿ ಅಲ್ಪಸಂಖ್ಯಾತರ ಪ್ರತಿನಿಧಿಯಾಗಿ, ಜನತಂತ್ರ ವ್ಯವಸ್ಥೆಯಲ್ಲಿ ಒಬ್ಬ ಜನಪ್ರತಿನಿಧಿಯಾಗಿ ಹೇಗಿರಬೇಕೆಂದು ಯಾವುದೇ ಪಕ್ಷಾಪಾತ ಮಾಡದೇ ಈ ಜನತಂತ್ರ ವ್ಯವಸ್ಥೆಯಲ್ಲಿ ಕಾರ್ಯ ಮಾಡಿದಂಥ ವ್ಯಕ್ತಿ. ಇಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ಮತ್ತು ಕನ್ನಡಿಗರಿಗೆ ತುಂಬಲಾರದ ಹಾನಿ ಎಂದು ಹೇಳಬಯಸುತ್ತೇನೆ.

ಶ್ರೀ ವಾಸುದೇವರವರು, ಶ್ರೀ ಶಂಕರೇಗೌಡರವರು, ಶ್ರೀ ಎಂ.ಬಿ.ದಿವಟರ್‌ರವರು, ಶ್ರೀ ಬಿ.ಪಿ.ಗಂಗಾಧರ್‌ರವರು, ಇವರೆಲ್ಲರೂ ಸಹಿತ ವಿಧಾನ ಸಭೆಯ ಮೂಲಕ ಜನತಂತ್ರದಲ್ಲಿ ತಮ್ಮದೇ ಆದಂಥ ಸೇವೆಯನ್ನು ಮಾಡಿ ನಮ್ಮನ್ನು ಅಗಲಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾವು ಬಯಸುತ್ತಿದ್ದೇವೆ.

ಶ್ರೀ ಬಿ.ಟಿ.ಚನ್ನಬಸಪ್ಪನವರು ಬಹಳ ಸಜ್ಜನ ವ್ಯಕ್ತಿ. ಕೃಷಿಕರಾಗಿ, ಉದ್ದಿಮೆದಾರರಾಗಿ, ಬಹು ದೊಡ್ಡ ಉದಾರ ದಾನಿಗಳಾಗಿ ಈ ಜನತಂತ್ರದಲ್ಲಿ ಅವರು ಮತ್ತು ಅವರ ಕುಟುಂಬದ ತಾಯಿಯಿಂದ ಎಲ್ಲರೂ ಕೂಡ ವಿಧಾನ ಪರಿಷತ್ತಿನಲ್ಲಿ ಕಾರ್ಯ ಮಾಡಿದ್ದಾರೆ. ಇವರು ಬಹಳ ಚಿಕ್ಕವಯಸ್ಸಿನಲ್ಲಿ ಅಗಲಿದ್ದಾರೆ. ಇಂಥ ಸಜ್ಜನ

ವ್ಯಕ್ತಿ ಹಾಗೂ ಎಲ್ಲಾ ದೃಷ್ಟಿಯಿಂದಲೂ ಜನತಂತ್ರ ವ್ಯವಸ್ಥೆಯಲ್ಲಿ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದಂತ ವ್ಯಕ್ತಿ ಅಗಲಿರುವುದು ಕರ್ನಾಟಕದ ರಾಜಕೀಯದಲ್ಲಿ ಸಜ್ಜನ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಈ ಜನತಂತ್ರಕ್ಕೆ ಬಹಳ ದೊಡ್ಡ ಸಹಕಾರ ಮಾಡಿದಂಥ ಈ ಜನರುಗಳನ್ನು ನಾವು ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ. ಮತ್ತು ಇವರೆಲ್ಲರೂ ನೀಡಿದಂಥ ತತ್ವ ಸಿದ್ಧಾಂಥ ಅಥವಾ ನಡೆದು ತೋರಿಸಿದ ಮಾರ್ಗದಲ್ಲಿ ನಾವುಗಳು ನಡೆಯುವುದು ಬಹಳ ಅವಶ್ಯ ಈ ಜನತಂತ್ರ ವ್ಯವಸ್ಥೆಯಲ್ಲಿದೆ ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಶಿರಾ):-- ಮಾನ್ಯ ಸಭಾಧ್ಯಕ್ಷರೆ, ತಾವೇನು ಸಂತಾಪ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದ್ದೀರಿ, ಇದಕ್ಕೆ ಈಗಾಗಲೇ ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಧ್ವನಿಯನ್ನು ಕೂಡಿಸಿ, ಅವರು ಮಾಡಿದಂಥ ಸಾಧನೆಯ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ಒಂದು ದು:ಖದ ಸಂಗತಿ ಎಂದರೆ, ಸ್ವಾತಂತ್ರದ ಹೋರಾಟದ ದಿನಗಳಲ್ಲಿ ಹೋರಾಟ ಮಾಡಿದಂಥ ಧೀಮಂಥ ನಾಯಕರಗಳನ್ನು, ಮೂರು–ನಾಲ್ಕು ಜನರುಗಳನ್ನು ನಾವಿಂದು ಕಳೆದುಕೊಂಡಿದ್ದೇವೆನ್ನುವುದು ದು:ಖದ ವಿಚಾರ. ಶ್ರೀಮಾನ್ ಹಾರ್ನಳ್ಳಿ ರಾಮಸ್ವಾಮಿಯವರು ಅಪ್ಪಟ ಗಾಂಧಿವಾದಿಗಳು. ಅವರು ತಮ್ಮ ಕೊನೆಯ ಉಸಿರು ಇರುವವರೆವಿಗೂ ಖಾದಿಯನ್ನು ಧರಿಸುತ್ತಿದ್ದರು. ಅವರು ವಿಧಾನ ಸಭೆಗೆ ಬರುವ ಸಂದರ್ಭದಲ್ಲೂ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ಅವರು ನ್ಯಾಯವಾದಿಗಳಾಗಿ ಕೋರ್ಟಿಗೆ ಹೋಗುವಂಥ ಸಂದರ್ಭದಲ್ಲೂ ಕೂಡ ಗಾಂಧಿ ಟೋಪಿಯನ್ನು ಹಾಕಿಕೊಂಡು ಹೋಗುತ್ತಿದ್ದರು. ನಾನೊಬ್ಬ ಅಪ್ಪಟ ಆದರ್ಶ ಮತ್ತು ಗಾಂಧಿವಾದಿ ಎಂದು ತೋರಿಸುವ ನಿಟ್ಟಿನಲ್ಲಿ ಅವರ ನಡವಳಿಕೆ ಇರುತ್ತಿತ್ತು. ಒಂದು ಸಂತೋಷದ ಸಂಗತಿ ಎಂದರೆ, ನಾನು ಅವರ ಜೊತೆಯಲ್ಲಿ 1978 ರಲ್ಲಿ ಒಂದೇ ಸಾರಿ ವಿಧಾನ ಸಭೆಗೆ ಆಯ್ಕೆಯಾಗಿ ಬಂದಂಥ ಸಂದರ್ಭ. ಅದಕ್ಕೆ ಪೂರ್ವದಲ್ಲಿ ಅವರು ಕಾಂಗ್ರೆಸ್ಸಿನ ಅನೇಕ ಚಟುವಟಿಕೆಗಳಲ್ಲಿ ಭಾಗಿಗಳಾಗಿದ್ದರು. ದಿ:ದೇವರಾಜು ಅರಸ್‌ರವರ ನಿಕಟ ವರ್ತಿಯಾಗಿದ್ದರು. ದೇವರಾಜು ಅರಸ್‌ರವರ ಯಾವುದೇ ತೀರ್ಮಾನಗಳಲ್ಲಿಯೂ ಸಹ ಹಾರ್ನಳ್ಳಿ ರಾಮಸ್ವಾಮಿಯವರ ಸಲಹೆ, ಸೂಚನೆ, ಗಾಂಧಿವಾದ, ಕಾಂಗ್ರೆಸ್ಸಿನ ತತ್ವ, ಸಿದ್ಧಾಂಥಗಳನ್ನು ಪ್ರತಿಪಾದನೆ ಮಾಡುವ ರೀತಿಯಲ್ಲಿ ಅವರ ಕಾರ್ಯಕ್ರಮಗಳಿದ್ದವು. ಹೀಗಾಗಿ ಇವರ ಅಗಲಿಕೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಅಗಾಧವಾಗಿರತಕ್ಕಂಥ ನೋವು ಆಗಿದೆ. ಅವರ ಕೊನೆಯ ಉಸಿರು ಇರುವವರೆಗೂ ತನ್ನದೇ ಆದಂಥ ಕೊಡುಗೆಯನ್ನು ಕೊಡುತ್ತಿದ್ದರು. ಮಾರ್ಗದರ್ಶನ ಮಾಡುತ್ತಿದ್ದರು. ಬೋದನೆ ಮಾಡುತ್ತಿದ್ದರು. ಕಿವಿ ಹಿಡಿದು ತಿಳಿ ಹೇಳತಕ್ಕಂಥ ಕೆಲಸ ಮಾಡುತ್ತಿದ್ದರು. ಅಂಥವರು ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮಾಡಿರತಕ್ಕ

ಅದ್ವೀತೀಯ ಸಾದನೆಯನ್ನು ನಾವು ಯಾರೂ ಮರೆಯುವಂತಿಲ್ಲ. ನಾವು ಇದನ್ನು ನೆನೆಸಲೇಬೆಕಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅದೇ ರೀತಿಯಲ್ಲಿ ಇದಿನಬ್ಬನವರು, ಇವರು ಕೂಡ ಅಪ್ಪಟ ಗಾಂಧಿವಾದಿಗಳು, ಅಲ್ಪಸಂಖ್ಯಾತರಾದರೂ ಅವರು ಕನ್ನಡಕ್ಕೆ, ಕನ್ನಡ ಸಾಹಿತ್ಯಕ್ಕೆ ಮಾಡಿದಂಥ ಸೇವೆ ಅಗಾಧವಾಗಿದೆ. ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವುದರ ಜೊತೆಗೆ ಕವಿಗಳಾಗಿ ಅನೇಕ ರೀತಿಯಾದ ಕೃತಿಗಳನ್ನು, ಸಾಹಿತ್ಯಗಳನ್ನು, ರಚಿಸಿರುತ್ತಾರೆ. ಇವರು ಅಪ್ಪಟ ಗಾಂಧಿವಾದಿಯಾಗುವುದರ ಜೊತೆಗೆ ಯಾವಾಗಲೂ ಕೂಡ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ಇವರು ಕೂಡ ನಮ್ಮನ್ನು ಅಗಲಿದ್ದಾರೆ.

ಅದೇ ರೀತಿಯಾಗಿ ವಾಸುದೇವರವರು, ಶಂಕರೇಗೌಡರವರು, ದಿವಟರ್‌ರವರು, ಕೂಡ ನಮ್ಮನ್ನು ಅಗಲಿದ್ದಾರೆ. ದಿವಟರ್ ಬಗ್ಗೆ ಹೇಳುವುದಾದರೆ, ನನಗೆ ದು:ಖವಾಗುವ ಸಂಗತಿ ಎಂದರೆ, ಅವರು ವಿಧಾನ ಸಭೆಗೆ ಎರಡು ಬಾರಿ ಆಯ್ಕೆಯಾಗಿದ್ದರು ಜೊತೆಗೆ ಅವರು ಕೂಡ ನಮ್ಮ ವಯಸ್ಸಿನವರು. ಅವರು ಯಾವಾಗಲೂ ಕೂಡ ಸಿಂಗಟಾಲೂರು ನಾಲೆಯ ಬಗೆ ಹೋರಾಟ ಮಾಡುತ್ತಿದ್ದರು. ಪ್ರತಿ ಸಂದರ್ಭದಲ್ಲೂ ನಮ್ಮನ್ನೆಲ್ಲರನ್ನು ಬಳಸಿಕೊಂಡು ಅದಕ್ಕೆ ವಿಶೇಷವಾದ ಕಾಳಜಿಯನ್ನು ತೊರಿಸಿ ನೀರಾವಾರಿಗೆ ತನ್ನದೇ ಆದಂಥ ಒಂದು ಕೊಡುಗೆಯನ್ನು ಕೊಟ್ಟಂಥವರು. ದಿವಟರ್‌ರವರಿಗೆ ಮರಣ ಬರುವಂಥ ವಯಸ್ಸು ಆಗಿರಲಿಲ್ಲ. ಆದರೂ ಇವತ್ತು ಅವರು ಕಣ್ಮರೆಯಾಗಿದ್ದಾರೆ.

ಇದರ ಜೊತೆಯಲ್ಲಿ ಬಿ.ಪಿ.ಗಂಗಾಧರ್‌ರವರು, ಇವರು ನಮ್ಮ ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ಹುಟ್ಟಿ ಖ್ಯಾತ ನ್ಯಾಯಾವಾದಿಗಳಾಗಿದ್ದರು. ನ್ಯಾಯಾವಾದಿಗಳಾಗಿ 1967 ರಲ್ಲಿ ಪ್ರಪ್ರಥಮವಾಗಿ ಎಸ್.ಎಸ್.ಪಿ. ಪಾರ್ಟಿಯಿಂದ ಆಯ್ಕೆಯಾಗಿ ಬಂಧರು. ಅವರು ಹೇಗೆ ಎಂದರೆ, ಅವರಿಗೆ 60 ವರ್ಷವಾಗಿದ್ದರೂ ಕೂಡ ಪ್ರಾಕ್ಟೀಸ್ ಮಾಡುತ್ತಿದ್ದರು. ಅವರು ಪ್ರಾಕ್ಟೀಸ್ ಮಾಡುವ ಸಂದರ್ಭದಲ್ಲಿ ಅವರದೇ ಅದಂಥ ಧಾಟಿ ಇಟ್ಟುಕೊಂಡು ಕೋರ್ಟಿನಲ್ಲಿ ವಾದ ಮಂಡಿಸುತ್ತಿದ್ದರು. ಶ್ರೀಯುತರಿಗೆ ಐವತ್ತು ವರ್ಷ ಆದ ಮೇಲೆ ಅವರಿಗೆ ಯಾವುದೋ ಕಾರಣಕ್ಕೆ ಆರೋಗ್ಯದ ದೃಷ್ಟಿಯಿಂದ ಕಣ್ಣು ಹೋಯಿತು. ಕಣ್ಣು ಹೋದರೂ ಅವರ ಕೊನೆಯ ಉಸಿರು ಇರುವವರೆವಿಗೂ ಮೊನ್ನೆ ಮೊನ್ನೆಯವರಿಗೂ ಬೆಳಗ್ಗೆ ಎದ್ದ ತಕ್ಷಣ ರೇಡಿಯೋ ಮತ್ತು ಟಿ.ವಿ.ಯಲ್ಲಿ ಬರುವ ನ್ಯೂಸ್ ಮತ್ತು ಕೇಸ್ ಲಾ ಗಳನ್ನು ಕೇಳುತ್ತಿದ್ದರು. ಬಹಳಷ್ಟು ಜ್ಯೂನಿಯರ್ ಆಗಿದ್ದಂಥ ವಕೀಲರು ಅವರ ಮುಂದೆ ಹೋಗಿ ವಿಚಾರ ಪ್ರಸ್ತಾಪಿಸಿದಾಗ ಅವರು ಡ್ರಾಫ್ಟಿಂಗ್ ಕೂಡ ಮಾಡಿ ಕೊಡುತ್ತಿದ್ದರು ಎಂದರೆ, ಅವರ presence of mind ಹೇಗಿತ್ತು ಎಂದು ನಾವು ಅರ್ಥ

ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಿಂಥ ಹೆಚ್ಚಾಗಿ ಅವರು ತತ್ವ ಮತ್ತು ಸಿದ್ಧಾಂಥಗಳಲ್ಲಿ ನಂಬಿಕೆ ಇಟ್ಟಿದ್ದರು. ಕರ್ನಾಟಕ ಏಕೀಕರಣವಾದ ಮೇಲೆ ಕರ್ನಾಟಕ ಎಂದು ಮರು ನಾಮಕಾರಣವಾಗಬೇಕೆಂದು ಅವರು ವಿಧಾನ ಸಭೆಯಲ್ಲಿ ಭಾಷಣ ಮಾಡಿದ್ದರು. ಮೈಸೂರು ಎನ್ನತಕ್ಕಂಥದ್ದು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗಿರುವುದರಿಂದ ಅಖಿಂಡ ಕರ್ನಾಟಕಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕೆಂದು ತಮ್ಮದೇ ಆದಂಥ ದಾಟಿಯಲ್ಲಿ ವಿಧಾನ ಸಭೆಯಲ್ಲಿ ಮಾಡಿರತಕ್ಕಂಥ ಭಾಷಣ ಇವತ್ತೂ ಕೂಡ ಇದೆ. ಕರ್ನಾಟಕ ಏಕೀಕರಣವಾದ ನಂತರ ಕರ್ನಾಟಕ ಎಂದು ನಾಮಕರಣವಾದ ಮೇಲೆ ಶ್ರೀಮಾನ್ ದೇವರಾಜ ಅರಸುರವರನ್ನು ತುಮಕೂರಿಗೆ ಕರೆಸಿ ಶ್ರೀಯುತರೆ ಮುಂಚೂಣಿಯಲ್ಲಿ ನಿಂತು ಒಂದು ದೊಡ್ಡ ಸನ್ಮಾನವನ್ನು ತುಮಕೂರಿನಲ್ಲಿ ಪ್ರಪ್ರಥಮವಾಗಿ ಮಾಡಿದಂಥ ಒಬ್ಬ ಧೀಮಂತ ವ್ಯಕ್ತಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವರ ಬಗ್ಗೆ ಹೇಳತಕ್ಕಂಥದ್ದು ಸಾಕಷ್ಟು ಇದೆ, ಆದರೆ, ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಯಾವ ರೀತಿಯಾಗಿ ಮಾರ್ಗದರ್ಶಕರಾಗಿದ್ದರೆಂದು ನಾವುಗಳು ಮರೆಯುವುದಕ್ಕೆ ಸಾಧ್ಯವಿಲ್ಲ. ಮತ್ತೆ ನಾವು ಶ್ರೀಯುತ ಬಿ.ಪಿ.ಗಂಗಾಧರ್‌ರವರ ಹತ್ತಿರ ಹೋದಾಗ ಅವರು ಸಾರ್ವಜನಿಕವಾಗಿರತಕ್ಕಂಥ ವಿಚಾರಗಳ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸುತ್ತಿದ್ದರು ಎನ್ನತಕ್ಕಂಥದು ತಿಳಿಯುತ್ತಿತ್ತು. ಆ ರೀತಿಯಲ್ಲ, ಈ ರೀತಿಯಾಗಿ ಮಾಡಿ ಎಂದು ಅಲ್ಲಿಗೆ ಹೋದಂಥ ಎಲ್ಲಾ ಶಾಸಕರಿಗೂ ಹೇಳುತ್ತಿದ್ದರು. ವಯಸ್ಸಾಗಿರುವುದರಿಂದ ನಮಗೆ ಎನೂ ಗೊತ್ತಿಲ್ಲವೆಂದು ನಾವು ಅಂದುಕೊಳ್ಳುತ್ತಿದ್ದೆವು. ಆದರೆ, ಅವರು ನಮ್ಮ ಚಲನ ವಲನಗಳನ್ನು ಮತ್ತು ನಮ್ಮ ಮಾತುಗಳೆಲ್ಲವನ್ನು ಅವರು ಗಮನಿಸುತ್ತಿದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಅಂದರೆ, ಇಲ್ಲಿಯ ಬಗ್ಗೆ ಮತ್ತು ರಾಜ್ಯದ ಬಗ್ಗೆ ವಿಶೇಷವಾದಂಥ ಗಮನವನ್ನು ಇಟ್ಟುಕೊಂಡಿದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಶ್ರೀಯುತರು ನಮ್ಮನೆಲ್ಲ ಬಿಟ್ಟು ಅಗಲಿದ್ದಾರೆ. ಮತ್ತು ಶ್ರೀ ಬಿ.ಟಿ.ಚನ್ನಬಸಪ್ಪನವರೂ ಸಹ ನಮ್ಮ ಸಹಪಾಟಿಯಾಗಿದ್ದರು. ನಮ್ಮ ಜೊತೆಯಲ್ಲಿ ಅವರು ಒಳ್ಳೆಯ ಬಾಂದವ್ಯವನ್ನು ಇಟ್ಟುಕೊಂಡಿದ್ದರು. ಮತ್ತೆ ಶ್ರೀಯುತರು ಸರಳ ಮತ್ತು ಸಹೃದಯವನ್ನು ಹೊಂದಿರುವಂಥವರಾಗಿದ್ದ ಚನ್ನಬಸಪ್ಪನವರನ್ನು ನಾವು ಕಳೆದುಕೊಂಡಿದ್ದೇವೆ. ಒಂದು ದು:ಖದ ಸನ್ನಿವೇಶ ಏನೆಂದರೆ, ಅವರಿಗೆ ಕಿಡ್ನಿ ಫೇಲ್ಯೂರ್ ಆಗಿದ್ದಂಥಹ ಸಂದರ್ಭದಲ್ಲಿ ಅವರ ಶ್ರೀಮತಿಯವರೆ ಅವರಿಗೆ ಕಿಡ್ನಿಯನ್ನು ಕೊಟ್ಟರು. ಕಿಡ್ನಿಯನ್ನು ಕೊಟ್ಟರೂ ಕೂಡ ಅವರು ಬಹಳ ದಿವಸ ಉಳಿಯತಕ್ಕಂಥ ಸಂದರ್ಭವಾಗಲಿಲ್ಲ. ಅವರ ಸರಳತೆಯನ್ನು ಸ್ವಲ್ಪ ಸಡಿಲಗೊಳಿಸಿ ಶಿಸ್ತನ್ನು ಕಾಪಾಡಿಕೊಂಡಿದ್ದರೆ ಬಹುಶ: ಅವರು ಇನ್ನು ಬಹಳ ದಿವಸ ಬದುಕುವಂಥ ಅವಕಾಶ ಇತ್ತೆಂದು ನನಗೆ ಅನಿಸುತ್ತದೆ. ಅವರು ಕಾಲವಾದ ದಿವಸ ನಾನೂ ಕೂಡ ಅವರ ಊರಿಗೆ ಹೋಗಿ ಅಂತಿಮವಾದಂಥ ನಮನವನ್ನು ಸಲ್ಲಿಸಿ ಬಂದಿದ್ದೇನೆಂಬ ಮಾತನ್ನು ಹೇಳುತ್ತಾ ಇವತ್ತಿನ ದಿವಸ ಇದೇ ರೀತಿಯಾಗಿ ಕಾಲಗರ್ಭದಲ್ಲಿ

ಸೇರಿಕೊಂಡಿರುವಂಥ, ಅಗಲಿರುವ ನಾಯಕರುಗಳ ಆತ್ಮಕ್ಕೆ ಶಾಂತಿಯನ್ನು ಕೊರುವುದರ ಜೊತೆಗೆ ಅವರನ್ನು ನಂಬಿದಂಥ ಮನೆಯವರು ಮತ್ತು ಇತರರು ಯಾರೇ ಇದ್ದರೂ ಕೂಡ ಶ್ರೀಯುತರುಗಳ ಅಗಲಿಕೆಯಿಂದ ಆಗಿರುವಂಥ ನೋವನ್ನು ಭರಿಸುವಂಥ ಶಕ್ತಿ ಪರಮಾತ್ಮ ದಯಪಾಲಿಸಲೆಂದು ಹಾರೈಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ. ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ತಿಪ್ಪೆಸ್ವಾಮಿ(ಚಳ್ಳಕೆರೆ):– ಸನ್ಮಾನ್ಯ ಅಧ್ಯಕ್ಷರೆ, ಈ ಅಧಿವೇಶನದಲ್ಲಿ ಮತ್ತು ವಿಧಾನಪರಿಷತ್‌ನಲ್ಲಿ ಸೇವೆ ಸಲ್ಲಿಸಿ ನಮ್ಮಿಂದ ಅಗಲಿರತಕ್ಕಂಥ ಮಹಾನ್ ನಾಯಕರುಗಳಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ಮತ್ತು ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ ಹಾಗೂ ಈ ಪಟ್ಟಿಯಲ್ಲಿರುವವರಲ್ಲಿ ನಮ್ಮ ಜಿಲ್ಲೆಯವರಾಗಿರುವ ಶ್ರೀ ಬಿ.ಟಿ.ಚನ್ನಬಸಪ್ಪ ಮತ್ತು ನಾವು ಹಾಗೂ ಶ್ರೀ ಇದಿನಬ್ಬರವರು ಈ ಸದನದಲ್ಲಿದ್ದಂಥ ಸಂದರ್ಭದ ಬಗ್ಗೆ ಹೇಳುವುದಾದರೆ, ಮಾನ್ಯ ಇದಿನಬ್ಬರವರು ಕನ್ನಡದ ಅಭಿಮಾನಿಯಾಗಿದ್ದರು, ಈ ಸದನದಲ್ಲಿ ಮಾತನಾಡುವಾಗ ಸಂದರ್ಭಕ್ಕೆ ತಕ್ಕಂತೆ ಕಾವ್ಯದ ಮೂಲಕ ಜನಗಳಿಗೆ ಮತ್ತು ಸದನಕ್ಕೆ ಅರ್ಥವಾಗುವಂತಹ ರೀತಿಯಲ್ಲಿ ಮಾತನಾಡುತ್ತಿದ್ದರು. ಇದರ ಜೊತೆಗೆ ನಮ್ಮ ಜಿಲ್ಲೆಯವರು ಆಗಿರುವಂಥ ಸಜ್ಜನ ಮತ್ತು ಸರಳ ವಿಶಾಲ ಹೃದಯ ಹೊಂದಿದಂಥ ಶ್ರೀ ಚನ್ನಬಸಪ್ಪನವರ ಜೊತೆಯಲ್ಲಿ ಸೇರಿಕೊಂಡು ಬಹಳ ದಿವಸ ಒಟ್ಟಿಗೆ ರಾಜಕಾರಣ ಮಾಡಿದ್ದೇವೆ. ನಿಜವಾಗಿಯೂ ಸಹ ಇವರ ನಡೆ ನುಡಿ ನಮ್ಮ ಜಿಲ್ಲೆಯ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ. ಹಾಗೂ ಅವರು ನಿಷ್ಕಳಂಕರಾಗಿದ್ದರು. ಎಲ್ಲಾ ಜಾತಿ ವರ್ಗವನ್ನು ವಿಶಾಲ ಮತ್ತು ಸಮಾನ ದೃಷ್ಟಿಯಿಂದ ನೊಡಿರತಕ್ಕಂಥ ಮಹಾನ್ ವ್ಯಕ್ತಿಯಾಗಿದ್ದರು. ಇವತ್ತಿನದಿವಸ ನಮ್ಮನ್ನೆಲ್ಲ ಅಗಲಿರತಕ್ಕಂಥದವರಿಗೆಲ್ಲರ ಆತ್ಮಕ್ಕೆ ಶಾಂತಿ ಕೊಡಲೆಂದು ಮತ್ತು ಈ ಮಹಾನ್ ವ್ಯಕ್ತಿಗಳು ಅಗಲಿ ಹೋಗಿರತಕ್ಕಂಥ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕೊಡಲೆಂದು ಹೇಳುತ್ತಾ ಇದರ ಜೊತೆಗೆ ಶ್ರೀಯುತ ಹಾರನಹಳ್ಳಿ ರಾಮಸ್ವಾಮಿಯವರದು ವಿಶೇಷವಾದಂಥ ಗುಣ ಇದೆ. ಈ ಸದನಕ್ಕೆ ಮತ್ತು ರಾಜ್ಯಕ್ಕೆ ಹಾಗೂ ಸಮಾಜಕ್ಕೆ ಕೊಟ್ಟಂಥ ಸಲಹೆ ಮತ್ತು ಮಾರ್ಗದರ್ಶನ ಎಂದೆಂದಿಗೂ ಬಹಳ ಅತ್ಯುತ್ತಮವಾದಂಥವಾಗಿವೆ. ಇಂಥ ಮಹಾನ್ ನಾಯಕರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಮತ್ತು ಇತರರು ನಮ್ಮನ್ನು ಅಗಲಿರತಕ್ಕಂಥದ್ದು ಕರ್ನಾಟಕ ರಾಜ್ಯಕ್ಕೆ ಭರಿಸಲಾದಂಥ ಒಂದು ಅನ್ಯಾಯ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇವರ ಆತ್ಮಕ್ಕೆ ಶಾಂತಿ ಕೊಡುವುದರ ಜೊತೆಗೆ ಇವರ ಅಗಲಿಕೆಯಿಂದ ಆಗಿರುವ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರು ಕುಟುಂಬವರ್ಗದವರಿಗೆ ದೇವರು ಕೊಡಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ):– ಸನ್ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆಯನ್ನು ಇಲ್ಲಿ ಮಂಡನೆ ಮಾಡಲಾಗಿದೆ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ನನ್ನ ತಾಲ್ಲೂಕಿನವರು ಮತ್ತು ನನ್ನ ಮತ ಕ್ಷೇತ್ರಕ್ಕೆ ಸೇರಿರತಕ್ಕಂಥವರು ಆಗಿದ್ದಾರೆ. ಹಿಂದೆ ಗಂಡಸಿ ಕ್ಷೇತ್ರ ಇದ್ದಂಥ ಸಂದರ್ಭದಲ್ಲಿ 1978 ರಿಂದ 1983ರವರೆಗೆ ಗಂಡಸಿ ವಿಧಾನಸಭಾ ಕ್ಷೇತ್ರದ ಸದಸ್ಯರಾಗಿದ್ದರು. ಮತ್ತೆ ಅವರು ಪೂಜ್ಯರಾಗಿದ್ದರು. ನಾವೆಲ್ಲರೂ ಅವರನ್ನು ಬಹಳ ನಮ್ರತೆಯಿಂದ, ಪ್ರತಿ ವಿಶ್ವಾಸದಿಂದ ಅವರ ಆದರ್ಶಗಳನ್ನು ಕೇಳುವುದಕ್ಕೆ ಗಂಟೆಗಟ್ಟಲೆ ಅವರ ಹತ್ತಿರ ಕೇಳುತ್ತಿದ್ದೆವು. ಅವರು ನಿಧನವಾಗುವುದಕ್ಕಿಂಥ ಮೂರು ದಿವಸಗಳ ಮುಂಚಿತವಾಗಿ ಅವರು ಅರಸೀಕೆರೆಯಲ್ಲಿರುವ ಅವರ ತೋಟದ ಮನೆಯಲ್ಲಿ ತಂಗಿದ್ದರು. ಈ ಸಂದರ್ಭದಲ್ಲಿ ಅವರು ಆ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಮಾತನಾಡಿದ್ದರು. ಇವರು ಆದರ್ಶವಾದಿಯಾಗಿದ್ದರು. ಪಕ್ಷಭೇದವನ್ನು ಅವರು ಜೀವನದಲ್ಲಿ ನಾವು ಎಂದೂ ಕಂಡಿಲ್ಲ. ಅವರ ಅಗಲಿಕೆಯಿಂದ ಹಾಸನ ಜಿಲ್ಲೆಯ ತುಂಬಲಾರದಂಥ ನಷ್ಟ ಉಂಟಾಗಿದೆ. ಶ್ರಿಯುತರು ಮಲೆನಾಡು ಎಜ್ಯುಕೇಷನ್ ಸೊಸೈಟಿಯನ್ನು ಕಟ್ಟಿ ಈ ಸೊಸೈಟಿಯ ಮುಖಾಂತರ ಇವತ್ತಿನ ದಿವಸ ಇಂಜಿನಿಯರಿಂಗ್ ವಿಭಾಗದಲ್ಲಿ ಲಕ್ಷಾಂತರ ಜನ ಇಂಜಿನಿಯರ್‌ಗಳಾಗಿದ್ದಾರೆ. ಮತ್ತೆ ಕರ್ನಾಟಕ ರಾಜ್ಯದಲ್ಲಿ ಇವರ ಮಹಿಳಾ ಕಾಲೇಜು ಮತ್ತು ಇತರೇ ವಿದ್ಯಾಸಂಸ್ಥೆಗಳ ಮುಖಾಂತರ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಇಂಥ ಒಬ್ಬ ಮಹಾನ್ ವ್ಯಕ್ತಿ ಸ್ವತಂತ್ರ್ಯ ಹೋರಾಟಗಾರರಾಗಿದ್ದರು. ಕೊನೇ ದಿನಗಳನ್ನು ಅರಸೀಕೆರೆಯಲ್ಲಿ ಕಳೆಯಬೇಕೆಂಬ ಭಾವನೆಯಿಂದ ಒಂದು ಸುಂದರವಾದಂಥ ತೋಟವನ್ನು ಹೆದ್ದಾರಿಯಲ್ಲಿ ಅವರು ರೂಪಿಸಿಕೊಂಡಿದ್ದರು. ಇಲ್ಲಿಗೆ ಬಂಧಂಥ ಸಂದರ್ಭದಲ್ಲಿ ಅವರು ಮಾತನಾಡಿದ್ದನ್ನು ನೋಡಿದರೆ ಇಷ್ಟು ಬೇಗ ನಾನು ನಿಧನರಾಗುತ್ತೇನೆಂಬ ಭಾವನೆ ಅವರ ಮನಸ್ಸಿನಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಏಕೆಂದರೆ, ಹತ್ತಾರು ವರ್ಷಗಳ ಯೋಜನೆಯ ಬಗ್ಗೆ ಅವರು ಅವತ್ತಿನ ದಿವಸ ಮಾತನಾಡಿದರು. ಶ್ರೀಯುತರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರು ಸಚಿವರಾಗಿದ್ದಾಗ ಅವರು ನಮ್ಮ ಜಿಲ್ಲೆಯಲ್ಲಿ ಯಾವುದೇ ರೀತಿಯ ವೈಷಮ್ಯದ ರಾಜಕಾರಣವನ್ನು ಮಾಡಲಿಲ್ಲ. ಬಹಳ ಪ್ರಾಮಾಣಿಕವಾಗಿ ಆದರ್ಶಕ್ಕೆ ಪ್ರಿಯವಾದಂಥ ಕೆಲವೊಂದು ವಿಚಾರಗಳನ್ನು ಜಿಲ್ಲೆಗೆ ಧಾರೆ ಎರೆದು ಹೋದಂಥ ಮಹಾನ್ ವ್ಯಕ್ತಿ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ನಿಧನರಾಗಿರತಕ್ಕಂಥದ್ದಕ್ಕೆ ನಮಗೆ ಬಹಳ ದು:ಖವಾಗುತ್ತಿದೆ. ಅವರಿಗೆ ಭಗವಂತ ಚಿರಶಾಂತಿಯನ್ನು ಕೊಡಲೆಂದು ಈ ಸಂದರ್ಭದಲ್ಲಿ ನನ್ನ ತಾಲ್ಲೂಕಿನ ಜನತೆಯ ಪರವಾಗಿ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಈ ಸಂದರ್ಭದಲ್ಲಿ ಅಗಲಿರುವರಲ್ಲಿ ಒಬ್ಬರಾದ ಶ್ರೀ ಬಿ.ಎಂ.ಇದಿನಬ್ಬರವರು ಸದನದಲ್ಲಿ ಸಂದರ್ಭಕ್ಕೆ ತಕ್ಕಂತೆ ಕವನಗಳನ್ನು ರಚನೆ ಮಾಡಿ ಯಾವರೀತಿಯಾಗಿ ಸದನದ ಗಮನವನ್ನು ಸೆಳೆಯುತ್ತಿದ್ದರೆಂದು ಮತ್ತು ಅವರ

ವಿಚಾರಧಾರೆಯನ್ನು ಯಾವರೀತಿಯಾಗಿ ಮಂಡಿಸುತ್ತಿದ್ದರೆಂಬುದನ್ನು ನಾವು ಮೇಲೆ ಕುಳಿತುಕೊಂಡು ನೋಡುತ್ತಿದ್ದೆವು. ಕೆಲವೊಂದು ಸಮಾರಂಭಗಳಲ್ಲಿಯೂ ಕೂಡ ಕವಿತೆಗಳನ್ನು ರಚನೆ ಮಾಡಿ ಅಲ್ಲಿಯೇ ಹಾಡುತ್ತಿದ್ದರು. ಮತ್ತೆ ಶ್ರಿ ವಾಸುದೇವ್‌ರವರ ಬಗ್ಗೆ ಈಗಾಗಲೇ ಎಲ್ಲಾ ನಾಯಕರು ಅವರ ಬಗ್ಗೆ ಗುಣಗಾನ ಮಾಡಿದ್ದಾರೆ. ಮತ್ತೆ ಶ್ರೀ ಜೆ.ಶಂಕರೇಗೌಡರು, ಶ್ರೀ ಎಂ.ಬಿ.ದಿವಟರ್, ಶ್ರೀಬಿ.ಪಿ.ಗಂಗಾಧರ್‌ರವರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಬಿ.ಟಿ.ಚನ್ನಬಸಪ್ಪನವರ ಬಗ್ಗೆ ನಮ್ಮೆಲ್ಲರಿಗೂ ಪರಿಚಯ ಇತ್ತು. ಇವರು ಬಹಳ ಉತ್ತಮವಾದಂಥ ಸರಳ ಜೀವಿಗಳು ಮತ್ತು ದಾನಿಗಳಾಗಿದ್ದರು. ಇಂಥ ಮಹಾನ್ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಕರ್ನಾಟಕ ರಾಜ್ಯಕ್ಕೆ ತುಂಬಲಾರದಂಥ ನಷ್ಟ ಉಂಟಾಗಿದೆ. ಇವರೆಲ್ಲರ ಆತ್ಮಕ್ಕೆ ಮತ್ತು ಅವರ ಕುಟುಂಬ ವರ್ಗದವರಿಗೆ ಭಗವಂತ ಶಾಂತಿಯನ್ನು ಕೊಡಲೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರಂತೆ ಅವರ ವಂಶವೂ ಕೂಡ ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದೆ. ಹಾರನಹಳ್ಳಿ ರಾಮಸ್ವಾಮಿಯವರ ವಂಶವು ಕೂಡ ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದೆ. ಇವತ್ತು ಅವರ ಪುತ್ರರಾದ ಅಶೋಕ ಹಾರನಹಳ್ಳಿಯವರು ಕರ್ನಾಟಕ ರಾಜ್ಯದ Advocate General ಆಗಿ ನೇಮಕವಾಗಿದ್ದಾರೆ. ಉತ್ತಮವಾದಂಥ ನ್ಯಾಯವಾದಿಗಳು ಆಗಿದ್ದಾರೆ. ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಕುಟುಂಬ ಉತ್ತಮವಾಗಿ ಬೆಳೆಯಲಿ ಎಂದು ಈ ಸಂದರ್ಭದಲ್ಲಿ ನಾನು ಹಾರೈಸಿ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಡಿ.ಕೆ.ಶಿವಕುಮಾರ್(ಕನಕಪುರ): ಮಾನ್ಯ ಅಧ್ಯಕ್ಷರೆ, ತಾವು ಒಂದು ಸಂತಾಪ ಸೂಚನೆಯನ್ನು ಏನು 7 ಜನ ಗಣ್ಯ ವ್ಯಕ್ತಿಗಳ ಬಗ್ಗೆ ತಂದಿರುತ್ತೀರಿ, ನಾನು ಅದನ್ನು ಬೆಂಬಲಿಸುತ್ತೇನೆ. ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆ ಆಯೋಗದ ಒಂದು ವರದಿಯನ್ನು ಏನು ಕೊಟ್ಟಿದ್ದಾರೆ ಬಹುಶ ಅವರ ವರದಿಯ ಆಧಾರದ ಮೇಲೆ ನಾವು ಇವತ್ತು division level post ಗಳನ್ನು ತೆಗೆದು ಹಾಕಿದ್ದೇವೆ. ಹಿಂದೆ ಏನು DVC post ಗಳು ಇದ್ದವು, Revenue Department ನಲ್ಲಿ Joint Commissioner post ಗಳು ಏನಿದ್ದವು. ಇಡೀ ರಾಜ್ಯದಲ್ಲಿ ಅದರಲ್ಲಿಯೂ hierarchy post ಗಳನ್ನು ವಿಶೇಷವಾಗಿ Revenue Department ನಲ್ಲಿತ್ತು, ಮತ್ತು ಬೇರೆ ಬೇರೆ ಎಲ್ಲಾ ಇಲಾಖೆಗಳಲ್ಲೂ ಏನಿತ್ತು ಅವೆಲ್ಲವನ್ನು ಅಬಾಲಿಷ್ ಮಾಡುವುದಕ್ಕೆ ಅವರ ವರದಿ ಮುಖ್ಯವಾದಂಥ ಕಾರಣವಾಗಿದೆ. ಈ ರಾಜ್ಯಕ್ಕೆ ಆಡಳಿತವನ್ನು ಸರಳ ಮಾಡುವುದಕ್ಕೆ ಅವರದೆ ಆದಂಥ ಒಂದು ದೊಡ್ಡ ಕೊಡುಗೆಯನ್ನು ಅವರು ಕೊಟ್ಟುಕೊಂಡು ಬಂದಿದ್ದಾರೆ. ಆಮೇಲೆ

ವಿಶೇಷವಾಗಿ ಮಲೆನಾಡಿನ ವಿದ್ಯಾಸಂಸ್ಥೆಯನ್ನು ಕಟ್ಟಿ ಇಂಜಿನಿಯರಿಂಗ್ ಮತ್ತು ಅನೇಕ ಕಾಲೇಜುಗಳನ್ನು ಕಟ್ಟು ಲಕ್ಷಾಂತರ ಮಂದಿ ವಿದ್ಯಾರ್ಥಿಗಳನ್ನು ಆ ಭಾಗದಿಂದ ತಯಾರು ಮಾಡಿ ಈ ರಾಜ್ಯಕ್ಕೆ ಒಂದು ದೊಡ್ಡ ಕೊಡುಗೆಯಾಗಿ ಕೊಟ್ಟಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಆ ಭಾಗದಲ್ಲಿ ಬೇಕಾದಷ್ಟು ಜನ ರಾಜಕಾರಣಿಗಳು ಬಂದು ಹೋಗಿದ್ದಾರೆ. ಆದರೆ ಇವರು ವಿದ್ಯಾಕ್ಷೇತ್ರದಲ್ಲಿ ಒಂದು ಪ್ರಮುಖವಾದ ಜವಾಬ್ದಾರಿಯನ್ನು ತೆಗೆದುಕೊಂಡು, ಅದರಲ್ಲೂ ಹಾಸನ ಜಿಲ್ಲೆಯಲ್ಲಿ ವಿಶೇಷವಾಗಿ ಮಾಡಿದ್ದನ್ನು ನಾವು ಸ್ಮರಿಸಿಕೊಳ್ಳಲೇಬೇಕಾಗುತ್ತದೆ. ಅವರು Law Minister ಆಗಿದ್ದಂಥ ಸಂದರ್ಭದಲ್ಲಿ ನಾನು ಹೊಸದಾಗಿ ಶಾಸಕನಾಗಿದ್ದೆ, ಅವರು ಮಾನ್ಯ ವೀರಪ್ಪ ಮೊಯ್ಲಿಯವರು ಮಂತ್ರಿ ಮಂಡಲದಲ್ಲಿ ಕೆಲಸವನ್ನು ಮಾಡಿದ್ದಾರೆ. ಮುಜರಾಯಿ ಮಂತ್ರಿಗಳಾಗಿ ಕೂಡ ಅವರು ಕೆಲಸವನ್ನು ಮಾಡಿ ಅನೇಕ ರಚನಾತ್ಮಕವಾದಂಥ ಕಾರ್ಯಗಳನ್ನು ಮತ್ತು ತಿದ್ದುಪಡಿಗಳನ್ನು ಈ ರಾಜ್ಯದ ಜನತೆಗೆ ತಿಳಿಸಲಿಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ದೇವಸ್ಥಾನಗಳ ಬಗ್ಗೆ ಒಂದು ಹೊಸ ಬಿಲ್‌ನ್ನು ಪಾಸ್ ಮಾಡಿದರು. ಅದು ಸ್ವಲ್ಪ controversy ಆಗಿ ಮುಂದಕ್ಕೆ ಹೋಯಿತು. ಹೀಗೆ ಹತ್ತು ಹಲವಾರು ವಿಚಾರಗಳ ಬಗ್ಗೆ ಈ ರಾಜ್ಯಕ್ಕೆ ತನ್ನದೇ ಆದಂಥ ಒಂದು ರೀತಿಯಲ್ಲಿ ಕೊಡುಗೆಯಾಗಿ ಕೊಟ್ಟಿದ್ದಾರೆ. Recent ಆಗಿ ಕೂಡ ನಾವು ಮತ್ತು ಮಾನ್ಯ ಅಶೋಕರವರು ಎಲ್ಲರೂ ಸೇರಿ ದಿ:ಕೆಂಗಲ್ ಹನುಮಂತಯ್ಯನವರ ಒಂದು Foundation ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಅವರು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಕೂಡ ಮಾನ್ಯ ಹನುಮಂತಯ್ಯನವರ ವಿಚಾರದಲ್ಲಿ ಆದರ್ಶದ ಜೀವನ ಮತ್ತು ವಿಧಾನಸೌಧವನ್ನು ಕಟ್ಟಿದ ಬಗ್ಗೆ ಮತ್ತು ಸರ್ಕಾರ ಇದರ ಬಗ್ಗೆ ಹೆಚ್ಚಿನ ಒಂದು ಗಮನವನ್ನು ತರಲಿಲ್ಲ ಎನ್ನುವುದರ ಬಗ್ಗೆ ಅವರು ತಮ್ಮ ಮನದಾಳದ ನೋವನ್ನು ವ್ಯಕ್ತಪಡಿಸಿದರು. ಹೀಗೆ ಹತ್ತು ಹಲವಾರು ವಿಚಾರದ ಬಗ್ಗೆ ಅವರು ಯಾವಾಗಲೂ ಕೂಡ ಧ್ವನಿಯನ್ನು ಎತ್ತಿದರು ಮತ್ತು ಮಾಧ್ಯಮಕ್ಕೆ ಅವರದೇ ಆದ ನೇರ ನುಡಿಯ ಬಗ್ಗೆ ನಾವೆಲ್ಲಾ ನೆನಪಿಸಿಕೊಳ್ಳಲೇಬೇಕಾಗುತ್ತದೆ. ಇವತ್ತು ಕೂಡ ಅವರು ಹಾಕಿಕೊಟ್ಟಂಥ foundation ಬಹಳ ಭದ್ರವಾಗಿದೆ. ಅವರ ಸಂಸ್ಥೆ ಅವರ ಪೇಪರ್‌ಗಳು ಅವರ ಮಾಧ್ಯಮ ಇವೆಲ್ಲಾ ಕೂಡ ಇವತ್ತು ಇಡೀ ರಾಜ್ಯದಲ್ಲಿ ಒಂದು ಆದರ್ಶದ ಜೀವನವನ್ನು ನಮ್ಮಂಥದವರಿಗೆಲ್ಲಾ ದಾರಿದೀಪ ಎಂದು ಹೇಳುತ್ತೇನೆ. ಇದರ ಜೊತೆಗೆ ನನಗೆ ಮತ್ತೊಬ್ಬ ಆತ್ಮೀಯರಾದ ಎಂ.ಬಿ.ದಿವಟರ್ ಅವರು ನಾನು ನಮ್ಮ ಪಕ್ಷದಲ್ಲಿ ಕೆಲಸವನ್ನು ಮಾಡಿದ್ದೇವೆ. ನಾವೆಲ್ಲಾ ಯುವ ಕಾಂಗ್ರೆಸ್‌ನಲ್ಲಿ ಕೆಲಸವನ್ನು ಮಾಡುವಾಗ ನಮ್ಮ ಜೊತೆಯಲ್ಲಿ ಅವರು ಉಪಾಧ್ಯಕ್ಷರಾಗಿದ್ದರು. ಎರಡನೆಯ ಭಾರಿ ಶಾಸಕನಾಗಿದ್ದಾಗ ನಾವೆಲ್ಲಾ ಜೊತೆಯಲ್ಲಿ ಕೆಲಸವನ್ನು ಇಲ್ಲಿ ಮಾಡಿದ್ದೇವೆ. ವಿದ್ಯಾರ್ಥಿ ಜೀವನ ಇರುವಾಗ ನಾನು ಅವರ ರೂಂನಲ್ಲಿ ಮಲಗುತ್ತಿದ್ದೆ. ಜನರಲ್ ಹಾಸ್ಟೆಲ್‌ನಲ್ಲಿ

ಅವರ ಒಂದು ರೂಮ. ಇತ್ತು. ನಾವು ರಾಜಕಾರಣ ಮಾಡುವಂಥ ಸಂದರ್ಭದಲ್ಲಿ ತಿಂಗಳಗಟ್ಟಲೆ ಅವರ ರೂಂ ನ್ನು ಉಪಯೋಗಿಸಿಕೊಂಡಿದ್ದು ಕೂಡ ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಒಂದು ವಾರದ ಹಿಂದೆ ನಾನು ಕೊಪ್ಪಳಕ್ಕೆ ಹೋಗಿ ಅವರ ಮನೆಯ ಕುಟುಂಬದವರನ್ನು ಮಕ್ಕಳನ್ನು ಮಾತನಾಡಿ ಬರುವ ಒಂದು ಅವಕಾಶ ನನಗೆ ಸಿಕ್ಕಿತ್ತು. ಇನ್ನೊಬ್ಬ ಗಣ್ಯರಾದ ಬಿ.ಎಂ. ಇದಿನಬ್ಬರವರದು ಒಂದು ವಿಶೇಷವಾದಂಥ ವ್ಯಕ್ತಿತ್ವ, ದಕ್ಷಿಣ ಕನ್ನಡ ಜಿಲ್ಲೆಗೆ ಅಷ್ಟೆ ಅಲ್ಲ, ಇಡೀ ರಾಜ್ಯಕ್ಕೆ ಒಂದು ವ್ಯಕ್ತಿತ್ವ. ಆ ಭಾಗದಲ್ಲಿ ಮೈನಾರಿಟಿ ಸಮಾಜದಲ್ಲಿರುವ ಇವರು ಕನ್ನಡದ ಏನೊಂದು ಪ್ರತಿಭೆ ಇದೆಯಲ್ಲಾ, ಅವರಲ್ಲಿರುವಂಥ ಕವಿಜ್ಞಾನ, ಬದ್ಧತೆ ಇವೆಲ್ಲಾ ಕೂಡ ಇಡೀ ರಾಜ್ಯದ ಜನತೆಗೆ ಒಂದು ದೊಡ್ಡ ಆದರ್ಶ. ಅವರಿಗೆ ಸಿಕ್ಕ ವಯಸ್ಕರ ಶಿಕ್ಷಣ ವಿಚಾರದಲ್ಲಿ ಒಂದು ಕಡೆ ಕನ್ನಡದ ಅಧ್ಯಕ್ಷರನ್ನಾಗಿ ನಮ್ಮ ಸರ್ಕಾರ ಇರುವಾಗ ಮಾಡಲಾಗಿತ್ತು. ವಯಸ್ಕರ ಶಿಕ್ಷಣ ವಿಚಾರದಲ್ಲಿ ಅವರದೇ ಆದ ಒಂದು ಕೊಡುಗೆಯನ್ನು ಕೊಟ್ಟಿದ್ದಾರೆ. ಇದೆಲ್ಲಾ ಕೂಡ ಈ ರಾಜ್ಯಕ್ಕೆ ಅನೇಕ ಸಲ ಅವರು ಮಾಡಿರುವಂಥ ಸಾಧನೆಯ ಬಗ್ಗೆ ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಜೆ.ಶಂಕರೇಗೌಡರು. ವಿ.ವಾಸುದೇವರವರು, ಬಿ.ಪಿ.ಗಂಗಾಧರ್‌ರವರು ಬಿ.ಟಿ.ಚನ್ನಬಸಪ್ಪನವರು ಅವರೆಲ್ಲರಲ್ಲಿ ಕೆಲವರನ್ನು ನಾವು ನೋಡುವುದಕ್ಕಾಗಿಲ್ಲ. ಬಿ.ಟಿ.ಚನ್ನಬಸಪ್ಪನವರ ಜೊತೆಯಲ್ಲಿ ಕಮಿಟಿಯಲ್ಲಿ ಕೆಲಸವನ್ನು ನಾವೆಲ್ಲಾ ಮಾಡಿದ ಅನುಭವ ಉಂಟು. ಅವರದು ಸರಳವಾದ ವ್ಯಕ್ತಿತ್ವ ಅವರ ಕುಟುಂಬದವರು ಏನು ಅವರನ್ನು ಕಳೆದುಕೊಂಡಿದ್ದಾರೆ. ಅವರಿಗೆ ದೇವರ ಶಕ್ತಿಯನ್ನು ಕೊಡಲಿ ಎಂದು ಹೇಳಿ, ಇವತ್ತು ನಾವೆಲ್ಲಾ ಅವರ ಅನೇಕ ವಿಚಾರಗಳನ್ನು ಮತ್ತು ಅನುಭವಗಳನ್ನು ಹಂಚಿಕೊಂಡಿದ್ದೆವೆ. ಭಗವಂತ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ತಾವು ತಂದಿರುವಂಥ ಸಂತಾಪ ಸೂಚನೆಗೆ ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಯೋಗಿಶ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ನಮ್ಮನ್ನು ಅಗಲಿರುವಂಥ ಮಹಾನ್ ಚೇತನಗಳಿಗೆ ತಾವು ತಂದಿರುವಂಥ ಸಂತಾಪ ಸೂಚನೆಯನ್ನು ಬೆಂಬಲಸುತ್ತಾ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಅಷ್ಟೆ ಅಲ್ಲ ನಮ್ಮ ರಾಜ್ಯದಲ್ಲಿ ಹೆಸರಾಂತ ಒಬ್ಬ ವ್ಯಕ್ತಿ, ಒಬ್ಬ ಒಳ್ಳೆಯ ದೇಶಪ್ರೇಮಿ, ಕನ್ನಡಪ್ರೇಮಿ ಅಷ್ಟೆ ಅಲ್ಲ, ಒಬ್ಬ ಒಳ್ಳೆಯ ಮಾನವನಾಗಿ ಜೀವನ ನಡೆಸಿದಂಥ ಒಬ್ಬ ವ್ಯಕ್ತಿ ಬಿ.ಎಂ.ಇದಿನಬ್ಬನವರು. ಅವರ ಒಂದು ಕನ್ನಡ ಪಾಂಡಿತ್ಯ ಮತ್ತು ಆ ಕನ್ನಡ ಪ್ರೇಮ ಯಾವುದೇ ಕಾರ್ಯಕ್ರಮದಲ್ಲಿದ್ದರು ಕೂಡ ಆ ಕಾರ್ಯಕ್ರಮಕ್ಕೆ ಸ್ಪಂದನೆಯಾಗಿ ಪ್ರೇರಣೆ ಕೊಡುವ ನಿಟ್ಟಿನಲ್ಲಿ ಒಂದು ಕವಿತೆಯನ್ನು ರಚಿಸುತ್ತಿದ್ದರು. ಆ ಕವಿತೆಯಲ್ಲಿ ಕೂಡ ಅರ್ಥಪೂರ್ಣತೆ ಮತ್ತು ಭಾವಪೂರ್ಣತೆ ಇತ್ತು. ಅವರ ವೈಯಕ್ತಿಕ ಸಂಪರ್ಕ ಹಾಗೂ ಸ್ನೇಹ ನನಗೆ ಇತ್ತು. ಅವರ ಮನೆಗೆ ಹೋದಾಗ ಡಿ.ವಿ.ಜಿ.ಯವರ ಬಗ್ಗೆ,

ಕುವೆಂಪುರವರ ಬಗ್ಗೆ ಅವರಲ್ಲಿರುವಂಥ ಪ್ರತಿಭೆಗಳನ್ನು ಅಲ್ಲಿರುವಂಥ ವೈಶಿಷ್ಟತೆಯ ಬಗ್ಗೆ ತಿಳಿ ಹೇಳುತ್ತಿದ್ದರು. ಅವರು ಎಂತಹ ಒಂದು ಬಾಳ್ವೆಯನ್ನು ಅವರು ಬಾಳಿದರು ಎಂದರೆ, ಎಲ್ಲರ ಜೊತೆಯಲ್ಲಿ ಒಂದು ಸಾಮರಸ್ಯದ ಪ್ರೀತಿಯ ಒಂದು ಬದುಕು ಅವರದಾಗಿತ್ತು. ಇಂತಹ ಒಬ್ಬ ಸನ್ಮಿತ್ರನನ್ನು ನಾವು ಕಳೆದುಕೊಂಡಿದ್ದೇವೆ. ವಿಶೇಷವಾಗಿ ನಮ್ಮ ಕರ್ನಾಟಕಕ್ಕೆ ಒಬ್ಬ ಒಳ್ಳೆಯ ಕನ್ನಡ ಪ್ರೇಮಿಯನ್ನು ಕಳೆದುಕೊಂಡಿದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡುತ್ತಿದ್ದೇನೆ. ಹಾರನಹಳ್ಳಿ ರಾಮಸ್ವಾಮಿಯವರ ಬಗ್ಗೆ, ಅವರ ಆಳವಾದ ವಿದ್ವತ್ ಹಾಗೂ ಪರಿಪಕ್ವವಾದಂಥ ಅನುಭವ. ಅವರ ಆಡಳಿತ ಸುಧಾರಣೆ ಆಯೋಗದಲ್ಲಿ ತಂದಿರುವಂಥ ಒಂದು ವ್ಯಾಲ್ಯೂಮ್‌ಗಳಲ್ಲಿ ತಂದಿರುವಂಥ ಒಂದು ಪ್ರಯತ್ನಗಳು. ಅವರ ಬಗ್ಗೆ ಅನೇಕ ಚಿಂತನ ಮಂಥನಗಳನ್ನು ಮಾಡಬಹುದು. ಆದರೆ ಆಡಳಿತ ವ್ಯವಸ್ಥೆಯಲ್ಲಿ ಸರಳೀಕೃತಗೊಳಿಸುವಂಥದ್ದು ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವುದು actability ಯನ್ನು ತರುವಂಥದ್ದು. ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯಲ್ಲಿ ನಮ್ಮ ಭ್ರಷ್ಟಾಚಾರ ಬೇರೂರಿದಾಗ ನಿಜವಾದ ಅರ್ಥದಲ್ಲಿ ನಾವು ಅವರಿಗೆ ಕೊಡುವಂಥ ಶ್ರದ್ಧಾಂಜಲಿ ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಒಂದು ಮಹಾನ್ ಚೇತನದ ಪ್ರೇರಣೆ ನಮಗೆಲ್ಲರಿಗೂ ಸರ್ವತಾ ಒಂದು ಮಾರ್ಗದರ್ಶನದ ಸೂತ್ರವೆಂದು ನಾನು ತಿಳಿದುಕೊಂಡಿದ್ದೇನೆ. ಅದರ ಜೊತೆ ಜೊತೆಯಲ್ಲಿ ಇನ್ನಿತರ ಗಣ್ಯ ವ್ಯಕ್ತಿಗಳಾದ ಶ್ರೀ ವಿ.ವಾಸುದೇವ, ಜಿ.ಸಂಕರೇಗೌಡ, ಎಂ.ಬಿ.ದಿವಟರ್, ಬಿ.ಪಿ.ಗಂಗಾಧರ್ ಹಾಗೂ ಬಿ.ಟಿ.ಚನ್ನಬಸಪ್ಪ ಇಂತಹ ಮಹಾನ್ ಚೇತನಗಳನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಈ ಒಂದು ಅವಕಾಶಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಅಧ್ಯಕ್ಷರೆ, ಈ ಒಂದು ಸಂತಾಪ ಸೂಚನೆಗೆ ವಂದಿಸಿ ತಾವು ತಂದಿರುವ ಪ್ರಸ್ತಾವಕ್ಕೆ ತಮ್ಮ ಸಹಮತವನ್ನು ಕೋರಿ, ಈ ಸಂದರ್ಭದಲ್ಲಿ ಅತ್ಯಂತ ಹಿರಿಯ ಚೇತನ ಮತ್ತು ದೀರ್ಘ ಮೇಧಾವಿಗಳು ಹಾರನಹಳ್ಳಿ ರಾಮಸ್ವಾಮಿಯವರು. ನಾವು ಇವತ್ತು ಆದರ್ಶವಾದದ ಒಂದು ಕೊಂಡಿಯನ್ನು ಕಳೆದುಕೊಂಡಿದ್ದೇವೆಂದು ನಮಗೆಲ್ಲಾ ಭಾವನೆಯಾಗುತ್ತಿದೆ. ಇದರ ಜೊತೆಗೆ ಇವರು ಒಬ್ಬ ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟದಲ್ಲಿಯೂ ಕೂಡ ಮುಂಚೂಣಿಯಲ್ಲಿದ್ದವರು, ಇವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಕೂಡ ಭಾಗವಹಿಸಿ ಈ ದೇಶಕ್ಕಾಗಿ ತ್ಯಾಗವನ್ನು ಮತ್ತು ತಮ್ಮ ಸೇವೆಯನ್ನು ಅರ್ಪಣೆ ಮಾಡಿರುವಂಥಹವರಾಗಿದ್ದಾರೆ. ಅದು ಅಲ್ಲದೆ ಆಡಳಿತ ಸುಧಾರಣೆಯನ್ನು ತರುವಂತಹ ಸಂದರ್ಭದಲ್ಲಿ ಅಧ್ಯಕ್ಷರಾಗಿ ಅನೇಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಈ ಸುಧಾರಣೆಯ ವ್ಯವಸ್ಥೆಗೂ ಕೂಡ ಅವರು ಸಹಕಾರಿಯಾಗಿದ್ದರು ಎಂದು ಕೂಡ ಈ ಸಂದರ್ಭದಲ್ಲಿ ಭಾವಿಸಬೇಕಾಗುತ್ತದೆ. ಹಾಗೆಯೇ ಇವತ್ತು ಅವರ ಆತ್ಮಕ್ಕೆ ನಾವೆಲ್ಲರೂ

ಕೂಡ ಚಿರಶಾಂತಿಯನ್ನು ಕೋರಬೇಕೆಂದು ದೇವರಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಶ್ರೀ ಬಿ.ಎಂ.ಇದಿನಬ್ಬರವರು, ಶ್ರೀ ವಾಸುದೇವರವರು ಮತ್ತು ಶ್ರೀ ಜಿ.ಶಂಕರೇಗೌಡರವರು ಇವರು ನಮ್ಮ ಭಾಗದವರಾಗಿದ್ದವರು, ಹೊಸಪೇಟೆ ಕ್ಷೇತ್ರದಿಂದ 2 ಸಲ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ, ಈ ರಾಜ್ಯದ ಸೇವೆಯನ್ನು ಮಾಡಿರುವಂತಹ ವ್ಯಕ್ತಿಯಾಗಿದ್ದಾರೆ. ಇವರು ಅತ್ಯಂತ ಸರಳ ಸಜ್ಜನರಾಗಿದ್ದಾರೆ. ಶ್ರೀಯುತರು ರೈತರ ಪರವಾದಂತಹ ಅನೇಕ ಹೋರಾಟಗಳಲ್ಲಿ ಭಾಗಿಯಾಗಿ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಅವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತೇನೆ. ಶ್ರೀ ಎಂ.ಬಿ.ದಿವಟರ್‌ರವರು ನಮ್ಮ ಕ್ಷೇತ್ರದವರು ಹಾಗೂ ನಮ್ಮ ಜಿಲ್ಲೆಯವರಾಗಿದ್ದಾರೆ. ಅವರು ಕೂಡ ಕಾಂಗ್ರೇಸ್ ಪಕ್ಷದಲ್ಲಿ ಯುವನಾಯಕರಾಗಿ ಕೆಲಸ ಮಾಡಿದವರಾಗಿದ್ದಾರೆ. ಶ್ರೀಯುತರು 7 ಮತ್ತು 9ನೇ ವಿಧಾನಸಭಾ ಸದಸ್ಯರಾಗಿಯೂ ಕೂಡ ಈ ರಾಜ್ಯದ ಸೇವೆಯನ್ನು ಮಾಡಿದ್ದಾರೆ. ಶ್ರೀಯುತರು ವಿಧಾನಸಭಾ ಸದಸ್ಯರಾಗಿರುವಂತಹ ಸಂದರ್ಭದಲ್ಲಿ ಕೊಪ್ಪಳದಲ್ಲಿ ಸಾಹಿತ್ಯ ಸಮ್ಮೇಳನವನ್ನು ಅಲ್ಲಿ ಪ್ರಾರಂಭಿಸುವುದಕ್ಕೆ ಮತ್ತು ಸಮ್ಮೇಳನವನ್ನು ನಡೆಸಿರುವಂತಹ ಕೀರ್ತಿಯೂ ಕೂಡ ಅವರಿಗೆ ಹೋಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಸಾಹಿತ್ಯಭವನವನ್ನು ಕೂಡ ನಿರ್ಮಾಣ ಮಾಡುವುದರಲ್ಲಿ ಕಾರಣೀಕರ್ತರಾಗಿದ್ದಾರೆ. ನೀರಾವರಿ ವಿಚಾರದಲ್ಲಿಯೂ ಕೂಡ ಅವರು ಸಿಂಗಟಾನಲ್ಲೂರು ಇರಬಹುದು, ಹಿರೇಹಳ್ಳ ಯೋಜನೆ ಇರಬಹುದು. ಈ ಯೋಜನೆಗಳಿಗೆ ಚಾಲನೆ ಕೊಡುವುದರಲ್ಲಿ ಮುಂಚೂಣಿಯಲ್ಲಿದ್ದು ಹೋರಾಟವನ್ನು ಮಾಡಿರುವಂತಹ ಒಬ್ಬ ವ್ಯಕ್ತಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀ ಬಿ.ಟಿ.ಚನ್ನಬಸಪ್ಪರವರು ಕೂಡ ಒಬ್ಬ ಸರಳಸಜ್ಜನರಾದಂತಹ ವ್ಯಕ್ತಿಯಾಗಿದ್ದಾರೆ. ಅಂತಹ ವ್ಯಕ್ತಿಗಳ ಜೀವನದ ನಡವಳಿಕೆಗಳನ್ನು ನಾವೆಲ್ಲರೂ ಅನುಸರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇವರೆಲ್ಲರ ಆತ್ಮಕ್ಕೆ ಚಿರಶಾಂತಿಯೂ ಸಿಗಲೆಂದು ದೇವರಲ್ಲಿ ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಶ್ರೀನಿವಾಸ ಪ್ರಸಾದ್(ನಂಜನಗೂಡು): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯ ಸಂಬಂಧವಾಗಿ ನಾನು ಕೂಡ ಎರಡು ಮಾತನಾಡಬೇಕೆಂದು ಅನಿಸಿದೆ. ನಾನು ಕೂಡ ಕರ್ನಾಟಕ ವಿಧಾನ ಮಂಡಲದ ಸದಸ್ಯರಾಗಿ ಅಗಲಿರುವಂತಹ ನಾಯಕರುಗಳಿಗೆ ನನ್ನ ಶ್ರದಾಂಜಲಿಯನ್ನು ಅರ್ಪಿಸುತ್ತೇನೆ. ಶ್ರೀಯುತ ಹಾರ್ನಳ್ಳಿ ರಾಮಸ್ವಾಮಿಯವರು ವಕೀಲರಾಗಿದ್ದವರು ಮತ್ತು ಸ್ವಾತಂತ್ರ್ಯಯ ಹೋರಾಟಗಾರರಾಗಿದ್ದವರು, ಇವರು ಕರ್ನಾಟಕದ ಏಕೀಕರಣದಲ್ಲಿ ಮುಂಚೂಣಿಯಲ್ಲಿದ್ದವರು ಹಾಗೂ ಕ್ವಿಟ್ ಇಂಡಿಯಾ ಮೂವ್‌ಮೆಂಟ್ ನಲ್ಲಿಯೂ ಕೂಡ ಭಾಗವಹಿಸಿದ್ದರು. ಇವರು ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೋಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡವರಾಗಿದ್ದರು. ಹೋರಾಟವನ್ನು

ಮಾಡಿದಂತಹವರಲ್ಲಿ ಕೆಲವೇ ಕೆಲವರನ್ನು ನಾವು ಕಾಣುತ್ತೇವೆ. ಸ್ವಾತಂತ್ರ್ಯ ಹೋರಾಟವನ್ನು ಮಾಡದಂತಹ ಕೆಲವರಲ್ಲಿ ಅದರಲ್ಲಿ ತೊಡಗಿಸಿಕೊಂಡಂತಹ ಕೊನೆಯ ಕೊಂಡಿಗಳು ಇವರು ಎಂದು ನಾವು ಅವರನ್ನು ನೆನಸಿಕೊಳ್ಳುತ್ತಿರುತ್ತೇವೆ. ನಾನು ಬಹಳ ಹತ್ತಿರದಿಂದ ಶ್ರೀಯುತರನ್ನು ಅವರ ಜೊತೆಯಲ್ಲಿ ಓಡನಾಟವನ್ನು ಇಟ್ಟುಕೊಂಡಿದ್ದೆನೆ. ಇವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದಂತಹ ಆಸಕ್ತಿ ಇತ್ತು, ಪತ್ರಿಕೋದ್ಯಮಿಗಳಾಗಿದ್ದರು, ನಮ್ಮ ಸಹದ್ಯೋಗಿ ಮಿತ್ರರು ಮಾತನಾಡುತ್ತಾ ಹೇಳಿದ ಹಾಗೇ ಶ್ರೀಯುತರು ಆಡಳಿತ ಸುಧಾರಣಾ ಆಯೋಗದ ಆಧ್ಯಕ್ಷರಾಗಿ ಬಹಳ ಪರಿಶ್ರಮವನ್ನು ಹಾಕಿ ಆಡಳಿತದಲ್ಲಿ ಯಾವ ರೀತಿಯಾಗಿ ಸುಧಾರಣೆಯನ್ನು ಮಾಡಬೇಕೆಂಬ ಬಗ್ಗೆ ಒಂದು ಉತ್ತಮವಾದಂತಹ ವರದಿಯನ್ನು ಕೂಡ ಕೊಟ್ಟದವರಾಗಿದ್ದಾರೆ. ನಮಗೆ ಗಾಂಧಿವಾದಿಗಳು ಎಂದ ತಕ್ಷಣ ಗಾಂಧೀಜಿಯವರ ಮೂಲ ಚಿಂತನೆಗಳೂ ಏನಿತ್ತು, ಅಂತ್ಯೋದಯ ಮತ್ತು ಸರ್ವೋದಯ ಬಗ್ಗೆ ನಾನು ಅವರನ್ನು ನೋಡಿದ್ದೇನೆ. ಗಾಂದೀಜಿಯವರ ಚಿಂತನೆಯೇನಿತ್ತು, ಅಂತ್ಯೋದಯ ಎಂದರೆ ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿ ಇದ್ದವರ ಬಗ್ಗೆ ಯೋಚನೆಯನ್ನು ಮಾಡಿ ಅನಂತರ ಸರ್ವೋದಯವಾಯಿತು, ಸಮಾಜದ ಸಮಗ್ರ ಎಲ್ಲರ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡುವುದು ಗಾಂಧೀಜಿಯವರ ವಿಶೇಷವಾಗಿತ್ತು. ಅಂತ್ಯೋದಯ ಮತ್ತು ಸರ್ವೋದಯ, ಬಹುಶ: ನಾನು ಶ್ರೀ ರಾಮಸ್ವಾಮಿಗಳಲ್ಲಿ ಅವರು ಕಾಂಗ್ರೇಸ್ಸಿನ ಮುಖಂಡರಾಗಿರುವಂತಹ ಸಂದರ್ಭದಲ್ಲಿ ಅವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೆನೆ. ಬಹಳ He was an excellent human being. ಗಾಂಧೀಜಿಯವರ ಚಿಂತನೆಗಳನ್ನು ಅಳವಡಿಸಿಕೊಂಡು ಅದರ ಅಡಿಯಲ್ಲಿ ಅವರು ರಾಜಕೀಯ ಕ್ಷೇತ್ರದಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಹ ಹಾರ್ನಳ್ಳಿ ರಾಮಸ್ವಾಮಿಯವರು ಅವರು ಈ ದಿನ ತಮ್ಮಲ್ಲಿ ಇಲ್ಲ. ನಾನು ಮೊದಲು ಹೇಳಿದ ಹಾಗೆ ಸ್ವಾತಂತ್ರ್ಯ ಹೋರಾಟದ ಕೆಲವೇ ಕೆಲವು ಹೋರಾಟದಲ್ಲಿ ಮುಂಚೂಣಿಯಲ್ಲಿ ಇದ್ದ ನಾಯಕರಲ್ಲಿ ಒಬ್ಬರಾಗಿದ್ದರು. ಸ್ವಾತಂತ್ರ್ಯ ಹೋರಾಟ ಮಾಡಿದಂತಹ ವ್ಯಕ್ತಿಗಳ ಕೊನೆಯ ಸಾಲಿನಲ್ಲಿದ್ದಂತಹವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಶ್ರೀ ಇದಿನಬ್ಬನವರು ಕೂಡ ನಾನು ಮೊದಲೇ ಹೇಳಿದೆ. ಗಾಂಧಿವಾದಿಗಳು ಎಂದಕ್ಷಣ ಅವರು ಸಾಹಿತಿಗಳಾಗಿದ್ದಂತಹವರು, ಪ್ರಾಧಿಕಾರದ ಆಧ್ಯಕ್ಷರಾಗಿದ್ದವರು, ಕೃಷಿಕರು ಕೂಡ ಆಗಿದ್ದರು. ಅವರನ್ನು ನೋಡಿದಂತಹ ಸಮಯದಲ್ಲಿ ಗಾಂಧಿಜಿಯವರ simple living high thinking ಏನಿತ್ತು. ಬಹಳ ಸರಳವಾದಂತಹ ಜೀವನ ಮತ್ತು ಎತ್ತರಕ್ಕೆ ಯೋಚನೆಯನ್ನು ಮಾಡುವಂತಹ ಒಬ್ಬ ಆದರ್ಶವಾದಂತಹ ಒಬ್ಬ ರಾಜಕಾರಣಿ ಆಗಿದ್ದರು. ಶ್ರೀಯುತರು ಕೂಡ ಸಾಹಿತ್ಯದ ಬಗ್ಗೆ ಅಪಾರವಾದಂತಹ ಆಸಕ್ತಿಯನ್ನು ವಹಿಸಿ, ಅನೇಕ ಕೃತಿಗಳನ್ನು ಕೂಡ ಅವರು ಕನ್ನಡದಲ್ಲಿ ಕೊಟ್ಟಿರುವಂತಹವರಾಗಿದ್ದರು. ಹಾಗಾಗಿ ಅವರು ಕೂಡ ಗಾಂಧೀವಾದಿಗಳಾಗಿದ್ದವರು ಬಹಳ ಆದರ್ಶವಾದಿಗಳಾಗಿದ್ದವರು ಅವರನ್ನು ಕೂಡ ನಾವು ಈ ದಿನ

ನೆನಸಿಕೊಳ್ಳಬೇಕಾಗುತ್ತದೆ. ಅದೇ ರೀತಿಯಾಗಿ ಶ್ರೀ ವಾಸುದೇವರವರು ಇವರು ಬಹಳ ಸಣ್ಣ ವಯಸ್ಸಿನಲ್ಲಿಯೇ ಸದಸ್ಯರಾಗಿದ್ದರು. 1983ರಲ್ಲಿ ಮೊಟ್ಟಮೊದಲೇ ಬಾರಿಗೆ ಕಾಂಗ್ರೇಸೇತರ ಸರ್ಕಾರ ಬಂದಂತಹ ಸಂದರ್ಭದಲ್ಲಿ ಅವರು ಟಿ.ನರಸೀಪುರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ಅಂದು ಜನತಾ ಕ್ರಾಂತೀರಂಗದಲ್ಲಿಯೂ ಕೂಡ ಆಯ್ಕೆಯಾಗಿದ್ದವರು. ಅವರು 2 ವರ್ಷಗಳ ಕಾಲ ಇದ್ದರು. ಅವರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದರು. ಆದರೆ ಅವರಿಗೆ 2ನೇ ಸಾರಿ ಅವಕಾಶ ಸಿಗಲಿಲ್ಲ. ಏಕೆಂದರೆ ನಮ್ಮ ರಾಜಕೀಯದಲ್ಲಿ ಬಹಳ ಕಷ್ಟ. ಖಂಡಿತವಾದಿ ಲೋಕವಿರೋದಿ ಎನ್ನುವಂತಹ ಮಾತನ್ನು ಹೇಳುತ್ತೇವೆ. ಬಹಳ ನೇರ ನುಡಿಗಳಿಗೆ ಅವರು ತಮ್ಮ ವಿಚಾರಗಳಲ್ಲಿ ಯೋಚನೆಯನ್ನು ಮಾಡುವಂತವರಾಗಿದ್ದರು. ಅವರು 2 ವರ್ಷಗಳ ಕಾಲ ಸದಸ್ಯರಾಗಿದ್ದರು. ತುಂಬಾ ಸಾಮಾಜಿಕ ಕಳಕಳಿಯನ್ನು ಹೊಂದಿರುವಂತಹ ಯುವಕರು ಕೂಡ ಆಗಿದ್ದರು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಶ್ರೀ ಎಂ.ಬಿ.ದಿವಟರ್‌ರವರು ಕೂಡ ಬಹಳ ಸಣ್ಣ ವಯಸ್ಸಿನಲ್ಲಿಯೇ ಅವರು ಶಾಸಕರಾಗಿದ್ದರು. ಅವರು ಉತ್ತಮ ಸಂಘಟನಕಾರರು ಕೂಡ ಆಗಿದ್ದರು. ಯುವ ಕಾಂಗ್ರೇಸ್ಸಿನಲ್ಲಿ ಅವರು ಬಹಳ ಸಕ್ರಿಯವಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡವರಾಗಿದ್ದರು. ಏಕೆಂದರೆ ಅವರು ನಮ್ಮ ಜೊತೆಯಲ್ಲಿದ್ದವರಾಗಿದ್ದರು. ಅವರು ಕ್ಷೇತ್ರದ ಬಗ್ಗೆ ಬಹಳ ಉತ್ತಮವಾದಂತಹ ಕೆಲಸಗಳನ್ನು ಕೂಡ ಮಾಡಿದವರಾಗಿದ್ದರು. ಶ್ರೀ ಬಿ.ಪಿ.ಗಂಗಾಧರ್‌ರವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ನಮಗೆ ರಾಜಕೀಯದಲ್ಲಿ ವಿಶೇಷವಾಗಿ ರಾಜಕಾರಣಿಗಳಿಗೆ ಚುನಾಯಿತ ಪ್ರತಿನಿಧಿಗಳಿಗೆ ಇರಬೇಕಾದಂತಹ Human qualities ಆ ಮಾನವೀಯತೆಯ ಗುಣಗಳನ್ನು ನಾವು ವಿಶೇಷವಾಗಿ ಅವರ ಹತ್ತಿರ ನಾನು ಅವರ ಜೊತೆಯಲ್ಲಿ ಮಾತನಾಡಿದಂತಹ ಸಂದರ್ಭದಲ್ಲಿ ನಾನು ಕಂಡಿದ್ದೇನೆ. ಇನ್ನು ಶ್ರೀ ಚನ್ನಬಸಪ್ಪನವರು ವಿಧಾನಪರಿಷತ್ತಿನ ಸದಸ್ಯರಾಗಿದ್ದವರು ಅವರನ್ನು ಕೂಡ ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಕೂಡ ಬಹಳ untimely death ಅಕಾಲಿಕವಾದಂತಹ ಮರಣಕ್ಕೆ ಈಡಾಗಿರುವಂತಹದ್ದು ಮನಸ್ಸಿಗೆ ಬಹಳ ನೋವಾಗಿದೆ ಎಂದು ತಿಳಿಸಿ. ಶ್ರೀ ಜಿ.ಶಂಕರೇಗೌಡರ ಬಗ್ಗೆ ಹೇಳುವುದಾದರೆ. ರಾಜಕೀಯದಲ್ಲಿ ಬಹಳ ಮುಖ್ಯವಾಗಿರಬೇಕಾದಂತಹ ಮಾನವೀಯತೆಯ ಗುಣಗಳನ್ನು ಹೊಂದಿರುವಂತಹ ಅನೇಕ ಮುಖಂಡರನ್ನು ನಾವು ಕಾಣುತ್ತೇವೆ. ನಮ್ಮ ರಾಜಕೀಯದಲ್ಲಿ Humanitarian qualification is greater than academic qualification ಅನ್ನತಕ್ಕದ್ದು. ನಮಗೆ ಈ ಒಂದು ಶೈಕ್ಷಣಿಕ ಅರ್ಹತೆಗಳಿಗಿಂತ ಈ ಮಾನವೀಯತೆಯ ಗುಣಗಳು ಬಹಳ ಮುಖ್ಯವಾಗಿರುವಂತಹದ್ದನ್ನು ನಾವು ಕಾಣುತ್ತೇವೆ. ಹಾಗಾಗಿ ಶ್ರೀ ಶಂಕರೇಗೌಡರವರಲ್ಲಿ ಬಹುಶಃ ಆ ರೀತಿಯಾದಂತಹ ರೀತಿಯಲ್ಲಿ ಮಾನವೀಯತೆಯ ಗುಣಗಳನ್ನು ಹೊಂದಿರುವಂತಹ ನಾಯಕರುಗಳಲ್ಲಿ

ಅವರು ಕೂಡ ಒಬ್ಬರಾಗಿದ್ದರು ಎಂದು ಎಲ್ಲರಿಗೂ ಕೂಡ ಗೊತ್ತಿದೆ, ಹಾಗಾಗಿ ಇವತ್ತು ಕರ್ನಾಟಕ ವಿಧಾನಮಂಡಲದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರಾಗಿ ಚುನಾಯಿತ ಪ್ರತಿನಿಧಿಗಳಾಗಿ ತಮ್ಮ ಸೇವೆಯನ್ನು ಸಲ್ಲಿಸಿದಂತಹ ಗಾಂಧಿವಾದಿಗಳಾದಂತಹ ಹಾಗೂ ಸಮಾಜದಲ್ಲಿ ತಮ್ಮದೇ ಆದಂತಹ ರೀತಿಯಲ್ಲಿ ತಮ್ಮ ಸೇವೆಯ ಮುಖಾಂತರ ಚಿರಪರಿಚಿತರಾದಂತಹ ಅನೇಕರು ಸದಸ್ಯರ ಅಗಲಿಕೆಯಿಂದ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ ಎನ್ನುವಂತಹ ಮಾತನ್ನು ಹೇಳಿ ಇವತ್ತು ನಾನು ಕೂಡ ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿ ಭಾಗಿಯಾಗಿ ಅಗಲಿದ ಈ ಮುಖಂಡರುಗಳಿಗೆ ನನ್ನ ಶ್ರದ್ಧಾಂಜಲಿಯನ್ನು ಈ ಸಂದರ್ಭದಲ್ಲಿ ನಾನು ಅರ್ಪಿಸುತ್ತೇನೆ.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

12-30 PM

2. <u>ಪ್ರಕಟಣೆ</u>

ವಿಷಯ: ಶ್ರೀ ಸಿ.ಪಿ ಯೋಗೀಶ್ವರ, ವಿಧಾನಸಭೆಯ ಶಾಸಕರು, ವಿಧಾನಸಭೆ ಹಾಗೂ ಮತ್ತಿತರ ಶಾಸಕರು ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸಿರುವ ಬಗ್ಗೆ.

\- - -

ಸಭಾಧ್ಯಕ್ಷರು: 13ನೇ ವಿಧಾನಸಭೆಗೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಸಂಖ್ಯೆ: 185 ರಿಂದ ಚುನಾಯಿತರಾಗಿದ್ದ ಶ್ರೀ ಸಿ.ಪಿ.ಯೋಗೀಶ್ವರ್ ಅವರ ರಾಜೀನಾಮೆಯನ್ನು ದಿನಾಂಕ 31.3.2009 ರಂದು, ಗೋವಿಂದರಾಜ ನಗರದ ವಿಧಾನಸಭಾ ಕ್ಷೇತ್ರ ಸಂಖ್ಯೆ: 166 ರಿಂದ ಚುನಾಯಿತರಾಗಿದ್ದ ಶ್ರೀ ವಿ.ಸೋಮಣ್ಣನವರ ರಾಜೀನಾಮೆಯನ್ನು ದಿನಾಂಕ 4.4.2009 ರಂದು, ರಾಮನಗರದ ವಿಧಾನಸಭಾ ಕ್ಷೇತ್ರ ಸಂಖ್ಯೆ:183 ರಿಂದ ಚುನಾಯಿತರಾಗಿದ್ದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ರಾಜೀನಾಮೆಯನ್ನು ದಿನಾಂಕ 28.05.2009 ರಂದು ಚಿತ್ತಾಪುರ್ ವಿಧಾನಸಭಾ ಕ್ಷೇತ್ರ ಸಂಖ್ಯೆ:40 ರಿಂದ ಚುನಾಯಿತರಾಗಿದ್ದ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರ ರಾಜೀನಾಮೆಯನ್ನು ದಿನಾಂಕ 28.05.2009ರಂದು ಹಾಗೂ ಕೊಳ್ಳೆಗಾಲ ವಿಧಾನಸಭೆ ಕ್ಷೇತ್ರ ಸಂಖ್ಯೆ: 222 ರಿಂದ ಚುನಾಯಿತರಾಗಿದ್ದ ಶ್ರೀ ಆರ್.ಧ್ರುವನಾರಾಯಣ್‌ರವರ ರಾಜೀನಾಮೆಯನ್ನು ದಿನಾಂಕ 30.05.2009 ರಂದು ಅಂಗೀಕರಿಸಲಾಗಿದೆಯೆಂದು ಸದನಕ್ಕೆ ತಿಳಿಸಬಯಸುತ್ತೇನೆ.